ಸಂಪುಟ: 01 ಸಂಚಿಕೆ: 09 ಪುಟ: 04 ಬೆಲೆ: 02 ಶನಿವಾರ ಜೂನ್ 13 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ....

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:09 Pages:04 Price:02 SATURDAY JUNE 13 2026 RNI NO: KNKAN/26/A4008 E-mail:ajathashathru2026@gmail.com

## ಜಮೀರ್ ವಿರುದ್ಧ ಅಸಮಾಧಾನ ಹೊರಹಾಕಿದ ಸಿದ್ದು

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಲ್ಪಸಂಖ್ಯಾತ ವರ್ಗದ ನಾಯಕ ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್ ಪರಮಾಪ್ತರಾಗಿದ್ದವರು. ಆದರೆ ಈಗ ದೂರವಾಗಿದ್ದಾರಾ ಎಂಬ ಅನುಮಾನ ಕಾಡುತ್ತಿದೆ. ಸಿದ್ದರಾಮಯ್ಯನವರ 'ಪರಮಾಪ್ತ' ಎಂದೇ ಗುರುತಿಸಿಕೊಂಡಿದ್ದ ಜಮೀರ್ ಅಹ್ಮದ್ ಖಾನ್ ವಿರುದ್ಧವೇ ಈಗ ಸಿದ್ದರಾಮಯ್ಯ ಮುನಿಸು ಹೊರಹಾಕಿದ್ದಾರೆ.**



'ಅವನು ನನ್ನ ವಿರುದ್ಧವೇ ದಾವಣಗೆರೆಯಲ್ಲಿ ಕೆಲಸ ಮಾಡಿದ್ದಾನೆ' ಎಂದು ಹೇಳುವ ಮೂಲಕ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದ್ದಾರೆ. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಸಂಪುಟದಲ್ಲಿ ಜಮೀರ್ ಅಹ್ಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕೋರಲು ಅವರ ಬೆಂಬಲಿಗರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಬಂದಿದ್ದರು. ಆದರೆ, ಈ ಸಂದರ್ಭದಲ್ಲಿ ಬೆಂಬಲಿಗರ ಮನವಿ ಆಲಿಸುವ ಬದಲು ಸಿದ್ದರಾಮಯ್ಯನವರು ಅವರ ಮುಂದೆ ಜಮೀರ್ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಸಿಟ್ಟಿನಿಂದ ಬೆಂಬಲಿಗರ ಮುಂದೆ ಗುಡುಗಿದ ಸಿದ್ದರಾಮಯ್ಯ, "ಅವನು ನನ್ನ ಪರಮಾಪ್ತ ಅಂತ ನೀವೆಲ್ಲ ಹೇಳ್ತೀರಾ, ಆದರೆ ಅವನು ಚುನಾವಣೆಯಲ್ಲಿ ನನ್ನ ವಿರುದ್ಧವೇ ಕೆಲಸ ಮಾಡಿದ್ದಾನೆ" ಎಂದು ಗರಂ ಆಗಿ ಹೇಳಿದ್ದಾರೆ. ಅದಕ್ಕೆ ಬೆಂಬಲಿಗರು ಸಮಜಾಯಿಷಿ ನೀಡಲು ನೋಡಿದ್ದಾರೆ. ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಜಮೀರ್ ಅಹ್ಮದ್ ಖಾನ್ ಅವರು ವಸತಿ ಸಚಿವರಾಗಿ ಪ್ರಭಾವಿ ಖಾತೆಯನ್ನು ನಿಭಾಯಿಸಿದ್ದರು. ಸಿದ್ದರಾಮಯ್ಯನವರು ಹೋದಲ್ಲೆಲ್ಲಾ ಜಮೀರ್ ಇರುತ್ತಿದ್ದರು. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಡಿಕೆ ಶಿವಕುಮಾರ್ ಸಂಪುಟದಲ್ಲಿ ಸ್ಥಾನ ಪಡೆಯಲು ಜಮೀರ್ ಹರಸಾಹಸ ಪಡುತ್ತಿದ್ದಾರೆ.

## ಧರ್ಮಸ್ಥಳದ ವಿರುದ್ಧ ಅಪಪ್ರಚಾರಕ್ಕೆ 200 ಕೋಟಿ ಬಳಕೆ

# ತನಿಖೆಗೆ ಪ್ರಿಯಾಂಕ್ ಖರ್ಗೆ

**ಬೆಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳದ ಅಪಪ್ರಚಾರಕ್ಕಾಗಿ 200 ಕೋಟಿ ರೂ. ಬಳಕೆಯಾಗಿದೆ ಎಂಬ ಆರೋಪವನ್ನು ಸಮಗ್ರವಾಗಿ ಪರಿಶೀಲಿಸುವ ಅಗತ್ಯ ಇದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಸಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಪ್ರಕಾಶ್ ರಾಜ್ ಹೆಸರು ಪ್ರಸ್ತಾಪವಾಗಿದೆ. ನ್ಯಾಯಾಲಯ ಎಸ್ಐಟಿ ಮುಖ್ಯಸ್ಥರಿಂದ ಮಾಹಿತಿ ಕೇಳಿದೆ. ಪೊಲೀಸರು ಮೊದಲು ಮಾಹಿತಿ ನೀಡಲಿ, ಇಂತಹ ವಿಚಾರಗಳನ್ನು ಮಾಧ್ಯಮಗಳಲ್ಲಿ ಚರ್ಚೆ ಮಾಡುವುದು



ಸರಿಯಲ್ಲ. ಹೆಸರು ಪ್ರಸ್ತಾಪವಾದಾಕ್ಷಣ ಯಾರೂ ಕ್ರಿಮಿನಲ್‌ಗಳಾಗುವುದಿಲ್ಲ ಎಂದು ಹೇಳಿದರು.

ಧರ್ಮಸ್ಥಳ ವಿರುದ್ಧ ಅಪ ಪ್ರಚಾರಕ್ಕೆ ಬೇರೆ ಬಾಗಿಲಿನಿಂದ ದುಡ್ಡು ಬಂದಿದೆ. ಇದರಲ್ಲಿ ಕೆಲವರ ಸಹಭಾಗಿತ್ವ ಇದೆ ಎನ್ನುವ ಆರೋಪವನ್ನು ಬಂಧಿತ ವ್ಯಕ್ತಿ ಮಾಡಿದ್ದಾರೆ. 200 ಕೋಟಿ ರೂ. ಬಳಕೆಯಾಗಿದೆ ಎಂದು ಹೇಳುತ್ತಿದ್ದಾರೆ. ಇದು ಸಣ್ಣ ಮೊತ್ತ ಅಲ್ಲ, ಗಂಭೀರ ಪರಿಶೀಲನೆಯಾಗಬೇಕಿದೆ. ಆರೋಪ ಮಾಡುತ್ತಿರುವ ವ್ಯಕ್ತಿಯ ಮಾತುಗಳು ನಿಜವೋ, ಸುಳ್ಳೋ ಎಂಬುದನ್ನು ಪರಿಶೀಲಿಸಬೇಕಾಗಿದೆ ಎಂದರು. ಮೈಕ್ರೋ ಫೈನಾನ್ ಸ ವಿಚಾರವಾಗಿ ಸರ್ಕಾರ ರೂಪಿಸಿರುವ ಕಾನೂನುಗಳನ್ನು ಧರ್ಮಸ್ಥಳದ ಹಣಕಾಸು ಸಂಸ್ಥೆಗಳು ಪಾಲಿಸುತ್ತಿಲ್ಲ ಎಂದು ಮಾಧ್ಯಮದವರು

4ನೇ ಪುಟಕ್ಕೆ

## ಕುಟುಂಬ ನಿರ್ವಹಣೆಯಲ್ಲಿ ತಾಯಿಯ ಪಾತ್ರ ಮಹತ್ವದ್ದು : ಯೋಗಿನಿ ಅಕ್ಕಾ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಇಂದಿನ ಯುವ ಪೀಳಿಗೆಗೆ ಮಾತೃಸ್ಥಾನದ ಮಹತ್ವತೆಯನ್ನು ಅರಿವು ಮೂಡಿಸುವುದು ಅಗತ್ಯವಾಗಿದೆ ಸ್ವಸ್ಥ ಸುಖಿ ಕುಟುಂಬದ ನಿರ್ಮಾಣದಲ್ಲಿ ತಾಯಂದಿರ ಪಾತ್ರ ಅತ್ಯಂತ ಮಹತ್ವದ್ದು ಎಂದು ಬ್ರಹ್ಮಕುಮಾರಿ ಯೋಗಿನಿ ಅಕ್ಕ ತಿಳಿಸಿದರು.**

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಏರ್ಪಡಿಸಿದೆ ವಿಶ್ವ ತಾಯಂದಿರ ದಿನದ ಸಾನಿಧ್ಯ ವಹಿಸಿ ಮಾತನಾಡಿದರು ತಾಯಿ ಕರುಣೆಯ ಕಡಲು ಸಹನೆಯ ಮೂರ್ತಿ ವಾತ್ಸಲ್ಯದ ನಿಧಿ ಕ್ಷಮಾಧರಿತ್ರಿ ತ್ಯಾಗ ಪ್ರೀತಿಯ ಪ್ರತಿರೂಪ ಆಗಿದ್ದಾಳೆ



ತಾಯಂದಿರು ಮಕ್ಕಳ ಭವಿಷ್ಯ ರೂಪಿಸುವಲ್ಲಿ ಹಾಗೂ ಮನೆಯ ವಾತಾವರಣ ನಿರ್ಮಾಣ ಮಾಡುವಲ್ಲಿ ಗುರುತರ ಜವಾಬ್ದಾರಿ ಹೊಂದಿದ್ದಾರೆ ತಾಯಂದಿರು ಸಂಸಾರ

ಮಕ್ಕಳು ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಲು ಆಂತರಿಕವಾಗಿ ಮಾನಸಿಕವಾಗಿ ಸಶಕ್ತರಾಗಬೇಕು ಅದಕ್ಕಾಗಿ ಆಧ್ಯಾತ್ಮ ಜ್ಞಾನ ಮತ್ತು ಮೆಡಿಟೇಶನ್ ನನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ದಿನಾಂಕ 12.05. 26 ರಿಂದ 20.05. 26 ರ ವರೆಗೆ ಮಾನಸಿಕ ಸಶಕ್ತಿಕರಣಕ್ಕಾಗಿ ರಾಜಯೋಗ ಶಿಬಿರ ದಿನಾಂಕ 12.05. 26 ರಿಂದ ಸಂಜೆ 5:30 ರಿಂದ 6:30ವರೆಗೆ ಇರುತ್ತದೆ ಎಂದು ತಿಳಿಸಿದರು. ವೇದಿಕೆಯಲ್ಲಿ ತಾಯಂದಿರ ಮಕ್ಕಳು ತಮ್ಮ ತಾಯಿಗೆ ಪ್ರೀತಿ ಗೌರವವನ್ನು ಸಲ್ಲಿಸಿ ಆಶೀರ್ವಾದ ಪಡೆದರು. ಇದೊಂದು ಭಾವನಾಯುಕ್ತ ಕಾರ್ಯಕ್ರಮವಾಗಿ ಹೊರಹೊಮ್ಮಿತು.

## ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ ಪ್ರಸಾದ್ ಇಂದು ಬೆಳಗಾವಿಗೆ

ಅ.ಶ. ಸುದ್ದಿ ಬೆಳಗಾವಿ

**ಬೆಳಗಾವಿ: ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಮಾಜಿ ಕ್ರಿಕೆಟಿಗ ವೆಂಕಟೇಶ ಪ್ರಸಾದ್ ಅವರು ಜೂನ್ 13ರಂದು ಬೆಳಗಾವಿಗೆ ಆಗಮಿಸಲಿದ್ದಾರೆ.**



ಅಂದು ಬೆಳಿಗ್ಗೆ 10.30ಕ್ಕೆ ಸತ್ಯಾತ್ಮತೀರ್ಥ ಶಿಕ್ಷಣ ಸಂಸ್ಥೆಯ ವತಿಯಿಂದ ಬಿ.ಕೆ. ಮಾಡೆಲ್ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿರುವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಧರ್ಮದರ್ಶಿ ವಿ.ಎನ್. ಪಾಟೀಲ ವಹಿಸಲಿದ್ದಾರೆ. ಬಿ.ಇ. ಸೊಸೈಟಿ ಅಧ್ಯಕ್ಷ ಅವಿನಾಶ ಪೋತದಾರ, ಎಸ್‌ಇಎಸ್ ಸೊಸೈಟಿ ಅಧ್ಯಕ್ಷ ವಿಲಾಸ ಜೋಶಿ, ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ ರೋಷನ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕಾಂಬಳೆ ಸೇರಿದಂತೆ ಸಂಸ್ಥೆಯ ಧರ್ಮದರ್ಶಿಗಳು, ಗಣ್ಯರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

## ಜುಲೈ 12ರಂದು ವಿಶ್ವಕರ್ಮ ಸಮಾಜದ ಸಮಾವೇಶ 'ಪ್ರತಿಭಾ ಪುರಸ್ಕಾರ'

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜುಲೈ 12ರಂದು ರವಿವಾರ ಬೆಳಿಗ್ಗೆ 9 : 30ಕ್ಕೆ ನಗರದ ಶಿವಶಾಂತವೀರ ಮಂಗಲ ಭವನದಲ್ಲಿ ಅಖಿಲ ಕರ್ನಾಟಕ ವಿಶ್ವ ಕರ್ಮ ಮಹಾಸಭಾ ಜಿಲ್ಲಾ ವಿಶ್ವಕರ್ಮರ ಜನ ಜಾಗೃತಿ ಬೃಹತ್ ಸಮಾವೇಶ ಹಾಗೂ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪ್ರತಿಭಾ ಪುರಸ್ಕಾರ ಸಮಾರಂಭವು ಬರುವ ತಿಂಗಳ ಜುಲೈ 12ರ ರವಿವಾರ ಬೆಳಿಗ್ಗೆ 9.30 ಗಂಟೆಗೆ ನಗರದ ಶ್ರೀ ಶಿವಶಾಂತ ವೀರ ಮಂಗಲ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಾಗಲಿಂಗಪ್ಪ ಪತ್ತಾರ್ ತಿಳಿಸಿದರು.**

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕರ್ಮದ ಸಂಪೂರ್ಣ ವಿವರಣೆ ನೀಡಿದ ಅವರು, ಕಾರ್ಯಕ್ರಮದಲ್ಲಿ ನಮ್ಮ ಸಮಾಜದ ಹಿರಿಯ ಮುಖಂಡ ಮಹಾಸಭಾ ರಾಜ್ಯ ಅಧ್ಯಕ್ಷ




ಮಾಜಿ ಶಾಸಕ ಕೆಪಿ ನಂಜುಂಡಿ ವಿಶ್ವಕರ್ಮ ಇವರು ಆಗಮಿಸಲಿದ್ದು, ಅವರ ಸಾರಥ್ಯದಲ್ಲಿ ಕೊಪ್ಪಳ ಜಿಲ್ಲಾ ಮಟ್ಟದ ಸಮಾಜದ ಬೃಹತ್ ಸಮಾವೇಶ ಆಯೋಜಿಸಲಾಗಿದೆ ಎಂದು ತಿಳಿಸಿದರು. ಇದೇ ವೇಳೆ ಪ್ರಸಕ್ತ ಸಾಲಿನ ಎಸ್ ಎಸ್ ಎಲ್ ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಗಣನೀಯ ಸಾಧನೆ ಮಾಡಿದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಕೂಡ ನಡೆಯಲಿದೆ, ಪ್ರಸಕ್ತ ಸಾಲಿನಲ್ಲಿ ಶೇಕಡ 75ರಷ್ಟು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳು ಇದೇ ತಿಂಗಳ 30ನೇ ತಾರೀಕಿನ ಒಳಗಾಗಿ ತಮ್ಮ ಸಂಪೂರ್ಣ ಮಾಹಿತಿಯೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮಾಜದ ಶ್ರೀಗಳು , ಜನಪ್ರತಿನಿಧಿಗಳು, ಸಮಾಜ ಸಂಘಟನೆಯ ಪದಾಧಿಕಾರಿಗಳು ಸೇರಿದಂತೆ ಇತರರು ಪಾಲ್ಗೊಳ್ಳುವವರು ಎಂದು ಪತ್ತಾರ್ ಅವರು ಮಾಹಿತಿ ನೀಡಿದರು. ಸಮಾಜ ಬಾಂಧವರು ತಮ್ಮ ತಮ್ಮ ಮಕ್ಕಳ ಮತ್ತು ಕುಟುಂಬದೊಂದಿಗೆ ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪ್ರಕಟಣೆ ಮೂಲಕ ತಿಳಿಸಿ ಸರ್ವರನ್ನು ಸ್ವಾಗತಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಶರಣಪ್ಪ ಪತ್ತಾರ್, ಕೊಪ್ಪಳ ತಾಲೂಕ ಅಧ್ಯಕ್ಷ ಶ್ರೀನಿವಾಸ್ ಪಂಡಿತ್, ಕುಷ್ಟಗಿ ತಾಲೂಕ ಅಧ್ಯಕ್ಷ ವೀರೇಶ್ ಕಮ್ಮಾರ್, ಕಾರಟಗಿ ತಾಲೂಕ ಅಧ್ಯಕ್ಷ ಹನುಮೇಶ್ ಆಚಾರ್, ಮುಖಂಡರಾದ ಪ್ರಭಾಕರ್ ಬಡಿಗೇರ ಗುಳದಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಗಿಣಿಗೇರಿಯಲ್ಲಿ ನಿವೃತ್ತ ಶಿಕ್ಷಕಿಗೆ ಅಭಿನಂದನಾ ಕಾರ್ಯಕ್ರಮ

## ಪ್ರೀತಿ ಮತ್ತು ಕರುಣೆ ಹೊಂದಿದವರು ಶ್ರೇಷ್ಠ ಶಿಕ್ಷಕರಾಗುತ್ತಾರೆ ; ಅಭಿನವ ಶ್ರೀಕಂಠ ಸ್ವಾಮೀಜಿ

ಅ.ಶ. ಸುದ್ದಿ ಗಿಣಿಗೇರಿ

**ಗಿಣಿಗೇರಿ: ಯಾವ ವ್ಯಕ್ತಿಯಲ್ಲಿ ಪ್ರೀತಿ ಮತ್ತು ಕರುಣೆಯನ್ನು ಹೊಂದಿರುತ್ತಾರೇ ಅಂತವರು ಶ್ರೇಷ್ಠ ಶಿಕ್ಷಕರಾಗಿ ಹೊರಹೊಮ್ಮುತ್ತಾರೆ ಎಂದು ಗಿಣಿಗೇರಿಯ ಶ್ರೀಮದ್ ಆನೆಗುಂದಿ ಮಹಾಸಂಸ್ಥಾನ ಸರಸ್ವತಿ ಪೀಠದ ಶ್ರೀ ಅಭಿನವ ಶ್ರೀಕಂಠ ಸ್ವಾಮಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.**

ಅವರು ತಾಲೂಕಿನ ಸಮೀಪದ ಗಿಣಿಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಸತತ 32 ವರ್ಷಗಳ ಕಾಲ ಕನ್ನಡ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತಿ ಹೊಂದಿದ ಶಿಕ್ಷಕಿ ಕಾಶಿಬಾಯಿ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತು ಗಿಣಿಗೇರಿ ಹೋಬಳಿ ಘಟಕದ ವತಿಯಿಂದ ಸನ್ಮಾನ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತ, ಎಲ್ಲರನ್ನೂ ಸಮಾನವಾಗಿ ಕಾಣುವ



ಗುಣ ಇರುತ್ತದೆಯೋ ಅಂತವರು ಮಾತ್ರ ಅತ್ಯುತ್ತಮ ಗುರುವಾಗಲು ಸಾಧ್ಯ.

ಇಂತಹ ಎಲ್ಲ ಸರ್ವ ಶ್ರೇಷ್ಠ ಗುಣಗಳನ್ನು ಒಳಗೊಂಡು ಸತತ 32 ವರ್ಷಗಳ ಕಾಲ ಸೇವೆ ಸಲ್ಲಿಸಿದ ಕಾಶಿಬಾಯಿ ಶಿಕ್ಷಕಿ ಅವರದು ಸಾರ್ಥಕ ಸೇವೆ. ಸೇವೆಗೆ ನಿವೃತ್ತಿ ಇರಬಹುದು ಆದರೆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಶಾಶ್ವತವಾಗಿ ಅವರು ಗುರುವಾಗಿ ನೆಲೆಸುತ್ತಾರೆ ಎಂದರು. ಗಿಣಿಗೇರಿ ಹೋಬಳಿ ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಹಿರಿಯ ಸದಸ್ಯ ಡಾ.ಪಿ.ಎಂ.ಬಸವರಾಜ ಮಾತನಾಡಿ, ಶಿಕ್ಷಕಿ ಕಾಶಿಬಾಯಿ ಅವರು ಸುಧೀರ್ಘ ವರ್ಷಗಳ ಕಾಲ ಕನ್ನಡ ಶಿಕ್ಷಕಿಯಾಗಿ ಅಪಾರ ಶಿಷ್ಯ ಬಳಗಕ್ಕೆ ಕನ್ನಡದ ಕಂಪನ್ನು ಧಾರೆ ಎರೆಯುವ ಮೂಲಕ ಅತ್ಯಂತ ಶ್ರೇಷ್ಠ ಸೇವೆಗೆದಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಇವರಿಗೆ ಸನ್ಮಾನ ಹಾಗೂ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳುವುದಕ್ಕೆ ಹೆಮ್ಮೆ ಎನಿಸುತ್ತಿದೆ ಎಂದರು. ಶಾಲೆಯ ಹಳೆಯ ವಿದ್ಯಾರ್ಥಿಗಳಾದ ಸಹಾಯಕ ಪ್ರಾಧ್ಯಾಪಕ ಡಾ. ನಿಂಗಪ್ಪ ಕಂಬಳಿ, ಶಿಕ್ಷಕ ಪ್ರಾಣೇಶ ಪೂಜಾರ್, ಹನುಮಂತ ಕೋಲ್ಕಾರ್, ಅನಿಲ್ ಜಾನ, ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಟಿ. ವೈಶಂಪಾಯನ, ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಸದಾನಂದಕುಮಾರ, ಜ್ಞಾನಭಾರತಿ ಶಾಲೆಯ ಮುಖ್ಯ ಶಿಕ್ಷಕ ಸೋಮಲಿಂಗಪ್ಪ ಬೆಣ್ಣಿ, ಎಸ್ಡಿಎಂಸಿ ಅಧ್ಯಕ್ಷ ಸುಭಾಸ್ ಚಂದ್ರ ಹಲಿಗೇರಿ ಮಾತನಾಡಿದರು.

ಕೊಪ್ಪಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ರಾಮಚಂದ್ರ ಗೊಂಡಬಾಳ ಅಧ್ಯಕ್ಷತೆ ವಹಿಸಿದ್ದರು. ಕಸಾಪ ತಾಲೂಕು ಘಟಕದ ಕಾರ್ಯದರ್ಶಿ ಬಸವರಾಜ ಸಿರುಗುಂಪಿ ಶೆಟ್ಟರ್, ಶಿಕ್ಷಕ ದೇವರಾಜ ಮೇಟಿ, ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ದೇವರಾಜ ಹಲಿಗೇರಿ, ಹಿರಿಯ ಕಲಾವಿದ ವೆಂಕಪ್ಪ ಮೇಟಿ ಶ್ರೀಕಾಂತ ಗೋಡೆಕಾರ, ಮಲ್ಲಿಕಾರ್ಜುನ ಗುಡಿಗೇರಿ, ವೀರಣ್ಣ ಅಂಗಡಿ, ಬಸವರಾಜ ಗದ್ದಿ ಕಸಾಪ ನಿಕಟ ಪೂರ್ವ ಅಧ್ಯಕ್ಷ ಯಮನೂರಪ್ಪ ಗಂಟಿ, ಕಲ್ಲೇಶ ಎತ್ತಿನಮನಿ, ಶಿಲ್ಪ ಗಣಾಚಾರಿ, ಯಮನೂರಪ್ಪ ಚೌಹಾಣ್, ವೆಂಕೋಬ ಇಂದರಗಿ, ಮತ್ತಿತರರು ಉಪಸ್ಥಿತರಿದ್ದರು. ಪುಟ್ಟಣ್ಣವಾರದ ಕಾರ್ಯಕ್ರಮ ನಿರೂಪಿಸಿದರು. ಕಸಾಪ ಗಿಣಿಗೇರಿ ಹೋಬಳಿ ಘಟಕದ ಅಧ್ಯಕ್ಷ ಶಂಕರಗೌಡ ಪಾಟೀಲ್ ಸ್ವಾಗತಿಸಿ ವಂದಿಸಿದರು.

# ನಿಯಮ ಪಾಲಿಸದ ಉದ್ದಿಮಿಗಳಿಗೆ ಪರವಾನಿಗೆ : ಸಾರ್ವಜನಿಕರ ಆಕ್ರೋಶ

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ಪಟ್ಟಣದಲ್ಲಿ ನೂತನವಾಗಿ ಪ್ರಾರಂಭಗೊಂಡ ಸೂಪರ್ ಮಾರ್ಕೆಟ್ ಇಂದ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ ಇಲ್ಲಿ ಸಾರ್ವಜನಿಕರು ದೂರಿದರು. ನಾಗರಿಕರು ಸ್ಮಾರ್ಟ್ ಬಜಾರ್ ಮುಂಭಾಗದ ರಸ್ತೆಯ ಮೇಲೆ ಓಡಾಡಲು ಭಯಭೀತರಾಗುವ ಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆಲ್ಲ ಪುರಸಭೆ ಅಧಿಕಾರಿಗಳ ನಿರ್ಲಕ್ಷ ಕಾರಣವಾಗಿದೆ ಎಂದು ಆಕ್ರೋಶವನ್ನು ವ್ಯಕ್ತಪಡಿಸಿದರು.**

ಸಾರ್ವಜನಿಕ ವಲಯದಲ್ಲಿ ಯಾವುದೇ ಉದ್ದಿಮೆ ಪ್ರಾರಂಭಗೊಂಡ ನಂತರ ಸಾರ್ವಜನಿಕ ಹಿತಾಸಕ್ತಿಯನ್ನು ಬದಿಗೊತ್ತಿ ಉದ್ದಿಮೆಯ ಕಾರ್ಯ ಚಟುವಟಿಕೆಗಳು ನಡೆಸಬಾರದು ಎನ್ನುವ ನಿಯಮ ಸ್ಪಷ್ಟವಾಗಿ ಟ್ರೇಡ್ ಲೈಸೆನ್ಸ್ ನಲ್ಲಿ ಉಲ್ಲೇಖವಾಗಿರುತ್ತದೆ.



ಆದರೆ, ಕಾರಟಗಿ ಪಟ್ಟಣದಲ್ಲಿರುವ ಸ್ಮಾರ್ಟ್ ಬಜಾರ್ ಇಂದ ಸಾರ್ವಜನಿಕರಿಗೆ ಉದ್ದಿಮೆ ನಡೆಸುವ ಸಂದರ್ಭದಲ್ಲಿ ಸ್ಮಾರ್ಟ್ ಬಜಾರ್ ಮುಂಭಾಗದಲ್ಲಿ ವ್ಯಾಪಾರ ಮಾಡಲು ಬರುವ ಜನರ ಕಾರ್ಗ ಳು ಮತ್ತು ದ್ವಿಚಕ್ರ ವಾಹನಗಳು ಅಸಂಖ್ಯಾತವಾಗಿ ಸಾಲುಗಟ್ಟಿ ರಸ್ತೆಯ ಮೇಲೆ ನಿಲ್ಲಿಸಲಾಗುತ್ತಿದೆ. ಇದರಿಂದಾಗಿ ಅಪಘಾತಗಳಂತಹ ಅವಘಡಗಳು ಜರುಗುವ ಸಾಧ್ಯತೆ ಹೆಚ್ಚು.

ಜನದಟ್ಟಣೆಯಿಂದ ಕೂಡಿರುವ ಕಾರಟಗಿ ಪಟ್ಟಣದಲ್ಲಿ ಪುರಸಭೆ ಅಧಿಕಾರಿಗಳು ಉದ್ದಿಮೆ ಪರವಾನಿಗೆ ನೀಡಿದ ನಂತರ ಅದರ ಕಾರ್ಯ ಚಟುವಟಿಕೆಗಳ ಮೇಲೆ ನಿಗಾ ವಹಿಸುವ ಜವಾಬ್ದಾ- ರಿಯೂ ಪುರಸಭೆ ಅಧಿಕಾರಿಗಳದ್ದು, ಪುರಸಭೆ ಅಧಿಕಾರಿಗಳು ಸ್ಮಾರ್ಟ್ ಬಜಾರ್ ನಿಯಮಗಳನ್ನು ಉಲ್ಲಂಘಿಸಿ, ಸುಗಮ ಸಂಚಾರಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆ ಆಗುವ ರೀತಿಯಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದು ಗಮನಕ್ಕೆ ಇದ್ದರೂ ಸಹ, ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.

ಇದು ಟ್ರಾಫಿಕ್ ಸಮಸ್ಯೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎನ್ನುವ ಅಧಿಕಾರಿಗಳ ಜಾಣ್ಮೆಯಿಂದ ಉತ್ತರಿಸುತ್ತಾರೆ. ಇಂತಹ ಸಬೂಬುಗಳಿಂದ ಇಲ್ಲಿನ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಈ ಕುರಿತು ಸಾಮಾಜಿಕ ಹೋರಾಟಗಾರ, ಸುಂದರ ರಾಜ್ ಅವರು ಪುರಸಭೆ ಅಧಿಕಾರಿಗಳ ಬೇಜವಾಬ್ದಾ- ರಿಯನ್ನು ಪ್ರಶ್ನಿಸಿದ್ದಾರೆ. ಉದ್ದಿಮಿಗಳಿಗೆ ಪರವಾನಿಗೆ ನೀಡಿದ ನಂತರ ಟ್ರಾಫಿಕ್ ಸಮಸ್ಯೆ ಆಗದಂತೆ ಸಾರ್ವಜನಿಕ ಹಿತಾ ಶಕ್ತಿಗೆ ಧಕ್ಕೆಯಾಗದಂತೆ ಜಾಗುರುಕತೆ ವಹಿಸುವುದು ಉದ್ದಿಮೆದಾರರದು ಮತ್ತು ಪುರಸಭೆ ಅಧಿಕಾರಿಗಳದ್ದು, ಕಾರಟಗಿ ಪುರಸಭೆ ಅಧಿಕಾರಿಗಳ ಕರ್ತವ್ಯ ಲೋಪದಿಂದ ಪಟ್ಟಣದ ಸೂಪರ್ ಮಾರ್ಕೆಟ್ ನಿಂದ ಸಂಚ- ರಿಸುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ಈ ಕೂಡಲೇ ಜನದಟ್ಟಣೆಯಿಂದ ಕೂಡಿದ ಕಾರಟಗಿ ಪಟ್ಟಣದಲ್ಲಿ ಸೂಪರ್ ಮಾರ್ಕೆಟ್ ಇಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಶೀರ್ಘ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಸೂಪರ್ ಮಾರ್ಕೆಟ್ ನಿಂದ ಸಂಚಾರಕ್ಕೆ ತೊಂದರೆಯಾಗಿ ಯಾವುದೇ ಅವಘಡಗಳು ಸಂಭವಿಸಿದರೆ ಅದಕ್ಕೆ ಪುರಸಭೆ ಅಧಿಕಾರಿಗಳೇ ನೇರ ಹೊಣೆ ಎಂದು ಎಚ್ಚರಿಕೆ ನೀಡಿದ್ದಾರೆ.

1ನೇ ಪುಟದಿಂದ....

ಅದಕ್ಕೆ ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿದ್ದರು. ಈಗ ಸಮಿತಿಯನ್ನು ಪುನರ್‌ರಚಿಸುವ ಅಥವಾ ರದ್ದುಮಾಡಿ ಈಗಾಗಲೇ ಸಿದ್ಧವಾಗಿರುವ ವರದಿಗಳ ಆಧಾರವಾಗಿಯೇ ಕ್ರಮ ತೆಗೆದುಕೊಳ್ಳಬೇಕೇ ಎಂಬ ಕು- ರಿತು ಮುಖ್ಯಮಂತ್ರಿಯವರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು. ಬೆಂಗಳೂರಿನ ಅಭಿವೃದ್ಧಿಗೆ ಪ್ರತ್ಯೇಕವಾಗಿ 26 ಸಾವಿರ ಕೋಟಿ ರೂ. ಅನುದಾನ ನೀಡುವಂತೆ ಮುಖ್ಯಮಂತ್ರಿಯವರು ಪ್ರಧಾನಿಯವ- ರಿಗೆ ಮನವಿ ಮಾಡಿದ್ದಾರೆ. ಬೆಂಗಳೂರು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ, ದೇಶಕ್ಕೆ ಆರ್ಥಿಕ ಪ್ರಗತಿಯ ಎಂಜಿನ್ ಆಗಿದೆ. ರಾಜ್ಯದ ಒಟ್ಟು ಜಿಡಿಪಿಗೆ ಬೆಂಗಳೂರಿನ ಕೊಡುಗೆ ಶೇ. 40ರಷ್ಟು. ಹೆಚ್ಚಿನ ವಲಸಿಗರು ಇಲ್ಲಿ ನೆಲೆಸಿದ್ದಾರೆ. ಬಂಡವಾಳ ಹ- ರಿದು ಬರುತ್ತಿದೆ. ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ಇದಕ್ಕಾಗಿ ಹೆಚ್ಚಿನ ಅನುದಾನ ಒದಗಿಸಬೇಕು ಎಂದರು. ಕೊಲ್ಲೂರು ಮೂಕಾಂಬಿಕೆ ದೇವಸ್ಥಾನಕ್ಕೆ ಭೇಟಿ ನೀಡುತ್ತಿರುವ ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸುವುದು ಅನಗತ್ಯ. ಮೇಕೆದಾಟು ಯೋಜನೆ ವಿಚಾರವಾಗಿ ಸುಪ್ರೀಂಕೋರ್ಟಿನ ಆದೇಶ ಇದೆ. ನೆರೆಯ ರಾಜ್ಯದ ಮುಖ್ಯಮಂತ್ರಿ ದೇವಸ್ಥಾನಕ್ಕೆ ಬಂದು ದೇವರ ದರ್ಶನ ಪಡೆದು ಹೋಗಲಿ. ಅವರು ಬಂದಾಕ್ಷಣ ನಾವು ನಮ ಹಕ್ಕನ್ನು ಬಿಟ್ಟುಕೊಡುವುದಿಲ್ಲ. ನೆಲ, ಜಲ, ಭಾಷೆ ವಿಚಾರವಾಗಿ ಯಾವುದೇ ರಾಜೀ ಇಲ್ಲ. ನಾವು ನಮ ರಾಜ್ಯದ ಹಿತಾಸಕ್ತಿಗೆ ಬದ್ಧರಾಗಿರುವಂತೆ, ತಮಿಳುನಾಡಿನ ಮುಖ್ಯಮಂತ್ರಿ ಕೂಡ ಕೆಲಸ ಮಾಡುತ್ತಾರೆ. ಅವರಿಗೆ ಅಡ್ಡಿ ಪಡಿಸುವುದು ಸರಿಯಲ್ಲ ಎಂದು ಹೇಳಿದರು. ಬಿಡದಿ ಭೂ ಸ್ವಾಧೀನ ವಿಚಾರವಾಗಿ ವಿರೋಧ ಪಕ್ಷಗಳು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಾಲಕಿ ವೆನ್ನಿಲಾ ಕೊಲೆ ಪ್ರಕರಣದಲ್ಲಿ ಕರ್ತವ್ಯ ಲೋಪವೆಸಗಿದ ಪೊಲೀಸ್ ಇನ್?ಸಪೆಕ್ಟರ್, ಸಬ್ ಇನ್?ಸಪೆಕ್ಟರ್ ಮತ್ತು ರೈಟ- ರ್ ಅವರನ್ನು ಇಂದು ಬೆಳಗ್ಗೆ ಅಮಾನತು ಮಾಡಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕವೂ ಕ್ರಮ ಕೈಗೊಳ್ಳದೇ ಲೋಪವೆಸಗಿದ್ದಾರೆ. ಕೊಲೆ ಆರೋಪಕ್ಕಾಗಿ ಬಾಲಕಿಯ ತಾಯಿ ಪ್ರಿಯಾಂಕ ಮತ್ತು ಮೋಹನ್ ಎಂಬ ಆರೋಪಿಯನ್ನು ಬಂಧಿಸಿರುವುದಾಗಿ ತಿಳಿಸಿದರು.

# ಹಾಲುಮತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

## ವಿದ್ಯಾರ್ಥಿಗಳ ಜೀವನ ಹೂವಿನ ಗಿಡದಂತಾಗಬೇಕು: ಭೀಮೇಶಪ್ಪ ಅಜ್ಜ ಅಗ್ನಿಕೊಂಡ





ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ವಿದ್ಯಾರ್ಥಿಗಳು ಜಾಲಿ ಮರ ಆಗಬಾರದು, ಹೂವಿನ ಗಿಡದಂತಾಗಬೇಕು ಎಂದು ಭೀಮಪ್ಪ ಅಜ್ಜ ಅಗ್ನಿಕೊಂಡ ಹೇಳಿದರು. ಅವರು, ಪಟ್ಟಣದ ಕನಕ ಭವನದಲ್ಲಿ ತಾಲೂಕು ಕುರುಬರ ಸಂಘ ಹಾಗೂ ಕನಕ ನೌಕರರ ಸಂಘದ ವತಿಯಿಂದ 'ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಆಶೀರ್ವಚನ ನೀಡಿದರು.**

ತಾಲೂಕಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಸಾಧಕರನ್ನು ಗುರುತಿಸಿ, ಹಾಲುಮತ ಸಮಾಜದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿ- ತ್ತು. ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ 40 ಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಶ್ರೀ ಸಿದ್ದರಾಮಯ್ಯ ಗುರುವಿನ ಮಹಾ ಸ್ವಾಮಿಗಳು ಬಸಪಟ್ಟಣ ಅವರು ಮಾತನಾಡಿ, ವಿದ್ಯಾರ್ಥಿಗಳು ಕನಸು ಕಾಣಬೇಕು ಅದು ರಾತ್ರಿ ಕಾಣುವ ಕನಸಾಗಿರಬಾರದು.

ಬದಲಾಗಿ ಜೀವನದ ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಗುರಿ ತಲುಪುವ ಕನಸು ಕಾಣಬೇಕು, ಆ ಕನಸು ನನಸು ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳ ನಡೆಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ತಂದೆ ತಾಯಿಯ ಮಾತು ಕೇಳಬೇಕು ಮತ್ತು ಗೌರವಿಸಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಹಿತ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ಮಾದಯ್ಯ ಗುರುವಿನ, ಮಹಾಸ್ವಾಮಿಗಳು ತುರವಿಹಾಳ, ಶ್ರೀ ಸಿದ್ದರಾಮಯ್ಯ ಗುರುವಿನ, ಬಸಪಟ್ಟಣದ ಶ್ರೀ ದಿನ ಗೆಡ್ಡೆಪ್ಪ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು.

ಕಾರ್ಯಕ್ರಮದಲ್ಲಿ ಕಾರಟಗಿ ತಾಲೂಕ ಹಾಲುಮತ ಸಮಾಜದ ತಾಲೂಕ ಅಧ್ಯಕ್ಷ ಉಮೇಶ್ ಬಂಗಿ, ಕುರುಬ ನೌಕರರ ಸಂಘದ ತಾಲೂಕ ಅಧ್ಯಕ್ಷ ವಿಠ್ಠಲ್ ಜೀರಗಾಳಿ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ವೀರೇಶ್ ಸಾಲೋಣಿ, ಕುರುಬ ಸಮಾಜದ ಮುಖಂಡರಾದ ಮಲ್ಲಿಕಾರ್ಜುನ ಕುರುಬರ, ಭೀಮಣ್ಣ ಕರಡಿ, ಪುರಸಭೆ ಅಧ್ಯಕ್ಷ ಮಂಜುನಾಥ್ ಮೇಗೂರು, ಸಾಬಣ್ಣ ಕಟ್ಟಿಕಾರ್ , ಡಾ॥ ವೀರಭದ್ರಗೌಡ, ಮರಿಯಪ್ಪ ಸಾಲೊನಿ, ರಮೇಶ್ ಕುಂಟೋಜಿ, ಉಮೇಶ್ ಗುರಿಕಾರ್, ನಾಗರಾಜ ಹುಡೇದ, ಅಯ್ಯಪ್ಪ ಯರಡೋಣ, ನರಸಿಂಗ್ ಸಿದ್ದಾಪುರ, ದ್ಯಾಮಣ್ಣ ಬೆನಕಟ್ಟಿ, ರಾಮಚಂದ್ರ ವಕೀಲರು, ಶಿಕ್ಷಕಿ ಗಂಗೂಬಾಯಿ, ವೀರೇಶ, ರಮೇಶ್ ಸಾಲೋಣಿ, ಪಂಪಾಪತಿ ಈಳಿಗನೂರು ಸೇರಿದಂತೆ ಅನೇಕ ಹಾಲುಮತ ಸಮಾಜದ ಮುಖಂಡರುಗಳು ಉಪಸ್ಥಿತರಿದ್ದರು.

## ನಮ್ಮ ರಾಜ್ಯದ ಭಾಷೆ, ಭೂಮಿ,ನೆಲ-ಜಲ ವಿಚಾರದಲ್ಲಿ ರಾಜಿಯಿಲ್ಲ, ವಿಜಯ್ ಅವರು ಬಂದು ದೇವರ ದರ್ಶನ ಪಡೆದುಕೊಂಡು ಹೋಗಲಿ :ಪ್ರಿಯಾಂಕ್ ಖರ್ಗೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನಮ್ಮ ರಾಜ್ಯದ ಭಾಷೆ, ಭೂಮಿ ಮತ್ತು ನೀರಿನ ವಿಚಾರದಲ್ಲಿ ನಾವು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಅವರು ಬಂದು ದೇವರ ಆಶೀರ್ವಾದ ಪಡೆದುಕೊಂಡು ಹೋಗಲಿ ಎಂದು ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಇಂದು ಕೊಲ್ಲೂರಿನ ದೇವಾಲಯಕ್ಕೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.**






ತಮಿಳು ನಾಡು ಸಿಎಂ ಅವರು ಇಂದು ಕೊಲ್ಲೂರಿಗೆ ದೇವರ ದರ್ಶನ ಮಾಡಲು ಬರುತ್ತಿದ್ದಾರೆ, ಬರಲಿ, ಅವರು ಬಂದ ತಕ್ಷಣ ನಾವು ನಮ್ಮ ಹಕ್ಕನ್ನು ಬಿಟ್ಟುಕೊಡುತ್ತಿಲ್ಲ, ನಾಡಿನ ಭಾಷೆ, ನೆಲ, ಜಲದ ಬಗ್ಗೆ ಸುಪ್ರೀಂ ಕೋರ್ಟ್ ಸರಿಯಾದ ಆದೇಶ ನೀಡಿದೆ, ನಾವು ಅದರ ಪ್ರಕಾರ ನಡೆದುಕೊಳ್ಳುತ್ತೇವೆ. ಅದರಲ್ಲಿ ರಾಜಿಯಿಲ್ಲ, ಅವರು ಬಯಸುವುದನ್ನು ದೇವರಲ್ಲಿ ಕೇಳಿಕೊಳ್ಳಲಿ,ನಾವು ಬೇಡ ಎಂದು ಆಕ್ಷೇಪಿಸುವುದೇಕೆ ಎಂದು ಕೇಳಿದರು.

## ಆಗುಂಬೆ ಘಾಟ್‌ನಲ್ಲಿ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ



ಅ.ಶ. ಸುದ್ದಿ ಶಿವಮೊಗ್ಗ

**ಶಿವಮೊಗ್ಗ: ಮಳೆ ಹಿನ್ನೆಲೆ ಗುಡ್ಡ ಕುಸಿತದ ಆತಂಕ ಹೆಚ್ಚಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಆಗುಂಬೆ ಘಾಟ್ (ರಾಷ್ಟ್ರೀಯ ಹೆದ್ದಾರಿ 169ಂ) ನಲ್ಲಿ ಭಾರಿ ವಾಹನಗಳ ಸಂಚಾರವನ್ನು ಜುಲೈ 15ರವರೆಗೆ ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ.**

ಶಿವಮೊಗ್ಗದಿಂದ ಹೊಸನಗರ ಮಾಸ್ತಿಕಟ್ಟೆ ಮಾರ್ಗವಾಗಿ ಕುಂದಾಪುರ ಹಾಗೂ ಉಡುಪಿಗೆ ಸಂಪರ್ಕ ಕಲ್ಪಿಸುವ ಆಗುಂಬೆ ಘಾಟ್ ಪ್ರದೇಶದಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಇತ್ತೀಚೆಗೆ ಕೆಲವು ಕಡೆಗಳಲ್ಲಿ ಭೂ ಕುಸಿತದ ಲಕ್ಷಣಗಳು ಕಂಡುಬಂದಿದ್ದು, ಸುರಕ್ಷತೆಯ ದೃಷ್ಟಿಯಿಂದ ಜಿಲ್ಲಾಡಳಿತ ಈ ನಿರ್ಧಾರ ಪ್ರಕಟಿಸಿದೆ. ಮಳೆ ಪ್ರಮಾಣ ಹೆಚ್ಚಾಗಿರುವ ಕಾರಣ ವಾಹನ ಸಂಚಾರಕ್ಕೂ ತೊಂದರೆ ಉಂಟಾಗುವ ಸಾಧ್ಯತೆ ಇದೆ.

ಪ್ರಯಾಣಿಕರ ಹಾಗೂ ವಾಹನ ಚಾಲಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಭಾರಿ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪರ್ಯಾಯ ಮಾರ್ಗಗಳು ಭಾರಿ ವಾಹನಗಳು ಕೆಳಕಂಡ ಮಾರ್ಗಗಳನ್ನು ಬಳಸುವಂತೆ ಸೂಚಿಸಲಾ ಗಿದೆ: ತೀಥ- ್ಹಳ್ಳಿ ನಾಗೋಡಿ ಕೊಲ್ಲೂರು ಕುಂದಾಪುರ ಉಡುಪಿ ಮಾರ್ಗ ತೀರ್ಥಹಳ್ಳಿ ಶೃಂಗೇರಿ ಬಜಗೋಳಿ ಉಡುಪಿ ಮಾರ್ಗ ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದ- ೇಶದಂತೆ ಮಳೆಗಾಲ ಮುಗಿಯುವವರೆಗೆ ಈ ನಿರ್ಬಂಧ ಜಾರಿಯಲ್ಲಿರಲಿದೆ. ವಾಹನ ಚಾಲಕರು ಹಾಗೂ ಸಾರ್ವಜನಿಕರು ಪರ್ಯಾಯ ಮಾರ್ಗಗಳನ್ನು ಬಳಸುವಂತೆ ಮನವಿ ಮಾಡಲಾಗಿದೆ.

## ರಸ್ತೆ ಸುರಕ್ಷತೆಗೆ 'ಹೆಲ್ಮೆಟ್' ಕಡ್ಡಾಯ: ಡಿವೈಎಸ್ಪಿ ನ್ಯಾಮಗೌಡರ್

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ರಸ್ತೆ ಅಪಘಾತಗಳಿಂದ ಜೀವಹಾನಿ ತಪ್ಪಿಸಲು ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಸಾರ್ವಜನಿಕರಿಗೆ ಕರೆ ನೀಡಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದ್ವಿಚಕ್ರ ವಾಹನ ಸವಾರರು ಹಾಗೂ ಹಿಂಬದಿ ಸವಾರರೂ ಹೆಲ್ಮೆಟ್ ಧರಿಸುವುದರಿಂದ ಗಂಭೀರ ಗಾಯಗಳು ಮತ್ತು ಜೀವಹಾನಿಯನ್ನು ತಡೆಗಟ್ಟಬಹುದು ಎಂದು ಹೇಳಿದರು.**



ವಾಹನ ಚಲಾಯಿಸುವ ವೇಳೆ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಅತಿವೇಗ, ಮೊಬೈಲ್ ಬಳಕೆ ಹಾಗೂ ನಿರ್ಲಕ್ಷ್ಯದಿಂದ ವಾಹನ ಚಲಾಯಿಸುವುದನ್ನು ತಪ್ಪಿಸಬೇಕು ಎಂದು ಸಲಹೆ ನೀಡಿದರು. ಹೆಲ್ಮೆಟ್ ಧರಿಸುವುದು ಕೇವಲ ಕಾನೂನು ಪಾಲನೆಯಷ್ಟೇ ಅಲ್ಲ, ಅದು ನಮ್ಮ ಜೀವ ರಕ್ಷಣೆಗೆ ಅತ್ಯಗತ್ಯವಾಗಿದೆ. ಪ್ರತಿಯೊಬ್ಬರೂ ಜವಾಬ್ದಾರಿಯಿಂದ ನಡೆದುಕೊಂಡು ಸುರಕ್ಷಿತ ಸಂಚಾರಕ್ಕೆ ಸಹಕರಿಸಬೇಕು" ಎಂದು ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ತಿಳಿಸಿದರು.

# ಗಂಗಾವತಿ ತಹಶೀಲ್ ಕಚೇರಿಯಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ

## ಶುದ್ಧ ನೀರಿನ ಘಟಕವೇ ಚುನಾವಣಾ ಸಾಮಗ್ರಿಗಳ ಸ್ಟೋರ್ ರೂಂ ಸಾರ್ವಜನಿಕರ ಆಕ್ರೋಶ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಇಲ್ಲಿನ ತಾಲೂಕು ಆಡಳಿತದ ಕೇಂದ್ರ ಬಿಂದುವಾಗಿರುವ ತಹಶೀಲ್ದಾರ್ ಕಚೇ- ರಿಗೆ ಪ್ರತಿದಿನ ನೂರಾರು ಸಾರ್ವಜನಿಕರು ತಮ್ಮ ವಿವಿಧ ಕಂದಾಯ, ದಾಖಲಾತಿ ಹಾಗೂ ವೈಯಕ್ತಿಕ ಕೆಲಸ ಕಾರ್ಯಗಳ ನಿಮಿತ್ತ ಆಗಮಿಸುತ್ತಾರೆ. ಕಚೇರಿಯ ಸಿಬ್ಬಂದಿ ಸೇರಿದಂತೆ ದಿನನಿತ್ಯ ಸಾವಿರಾರು ಜನರ ಓಡಾಟವಿರುವ ಇಂತಹ ಪ್ರಮುಖ ಸರ್ಕಾರಿ ಸ್ಥಳದಲ್ಲೇ ಸಾರ್ವಜನಿಕರಿಗೆ ಕನಿಷ್ಠ ಕುಡಿಯುವ ನೀರಿನ ಸೌಲಭ್ಯವೂ ಇಲ್ಲದೆ ತೀವ್ರ ಅಭಾವ ಸೃಷ್ಟಿಯಾಗಿದೆ.**

ಕಚೇರಿಯ ಒಳ ಆವರಣದಲ್ಲೇ ಸಾರ್ವಜನಿಕರ ಅನುಕೂಲಕ್ಕಾಗಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಶುದ್ಧ ಕುಡಿಯುವ ನೀರಿನ ಘಟಕವಿದ್ದರೂ, ಅದು ಸಾರ್ವಜನಿಕರ ದಾಹ ನೀಗಿಸುವ ಬದಲು ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಚುನಾವಣಾ ಸಾಮಗ್ರಿಗಳನ್ನು ಇಡುವ ಸ್ಟೋರ್ ರೂಂ ಆಗಿ ಮಾರ್ಪಟ್ಟಿರುವುದು




ಸಾರ್ವಜನಿಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಕಚೇರಿ ಆವರಣದಲ್ಲಿ ಧೂಳು ಹಿಡಿಯುತ್ತಿರುವ ಕುಡಿಯುವ ನೀರಿನ ಘಟಕವನ್ನು ದುರಸ್ತಿ ಮಾಡಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವ ಬದಲು, ಕಚೇರಿಯ ಚುನಾವಣೆ ಶಿರಸ್ತೆದಾರ್ ಆಗಿರುವ ರವಿ ನಾಯಕ್ವಾಡ್ ಅವರು ತಮ್ಮ ತೀವ್ರ ಬೇಜವಾಬ್ದಾರಿತನದಿಂದ ಘಟಕವನ್ನು ಚುನಾವಣಾ ಬಾಕ್ಸ್‌ಗಳನ್ನು ಇಡುವ ಸ್ಟೋರ್ ರೂಂ ಆಗಿ ಪರಿವರ್ತಿಸಿದ್ದಾರೆ ಎನ್ನುವ ಗಂಭೀರ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬಂದಿವೆ.

ಕಳೆದ 2019-20ರ ಸಾಲಿನಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ನಿರ್ಮಾಣವಾದ ಈ ಶುದ್ಧ ನೀರಿನ ಘಟಕದಲ್ಲಿ ಸದ್ಯಕ್ಕೆ ಯಾವುದೇ ರೀತಿಯ ನೀರಿನ ಶುದ್ಧೀಕರಣ ಯಂತ್ರೋಪಕರಣಗಳೇ ಇಲ್ಲದಂತಾಗಿದೆ. ಅಲ್ಲಿ ಅಳವಡಿಸಲಾಗಿದ್ದ ದುಬಾರಿ ಫಿಲ್ಟರ್ ಯಂತ್ರಗಳು ಎಲ್ಲಿ ಮಾಯವಾದವು ಎಂಬುದು ಸಾರ್ವಜನಿಕರನ್ನು ಕಾಡುತ್ತಿರುವ ದೊಡ್ಡ ಪ್ರಶ್ನೆಯಾಗಿದೆ. ಶುದ್ಧ ನೀರಿನ ಘಟಕದ ಹೆಸರಿನಲ್ಲಿ ಸಾರ್ವಜನಿಕರ ತೆರಿಗೆ ಹಣ ಮತ್ತು ಸರ್ಕಾರಿ ಅನುದಾನ ದುರ್ಬಳಕೆಯಾಗಿದೆಯೇ ಅಥವಾ ಒಳಗಿರುವ ಯಂತ್ರೋಪಕರಣಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿ ಈ ರೀತಿ ಸ್ಟೋರ್ ರೂಂ ಮಾಡಿಕೊಳ್ಳಲಾಗಿದೆಯೇ ಎಂದು ಆಕ್ರೋಶಗೊಂಡ ಸಾರ್ವಜನಿಕರು ಸ್ಥಳೀಯ ಆಡಳಿತ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಇಡೀ ಅವ್ಯವಸ್ಥೆಯ ಕು- ರಿತು ತೀವ್ರ ಅಸಮಾಧಾನ ಹೊರಹಾಕಿರುವ ಸಾಮಾಜಿಕ ಹೋರಾಟಗಾರ ರವಿ ಗುತ್ತೇದಾರ್ ಅವರು, ಸಾರ್ವಜನಿಕರ ಹಕ್ಕನ್ನು ಕಸಿದುಕೊಂಡು ಕುಡಿಯುವ ನೀರಿನ ಘಟಕವನ್ನು ಗೋದಾಮಿನಂತೆ ಬಳಸಿಕೊಳ್ಳುತ್ತಿರುವುದು ಖಂಡನೀಯ ಎಂದಿದ್ದಾರೆ. ತಕ್ಷಣವೇ ನೀರಿನ ಘಟಕದಲ್ಲಿ ಅಕ್ರಮವಾಗಿ ಇಡಲಾಗಿರುವ ಚುನಾವಣಾ ಬಾಕ್ಸ್‌ಗಳನ್ನು ತೆರವುಗೊಳಿಸಿ, ನೂತನ ಯಂತ್ರೋಪಕರಣಗಳನ್ನು ಅಳವಡಿಸುವ ಮೂಲಕ ಘಟಕವನ್ನು ಪುನರಾರಂಭಿಸಬೇಕು ಹಾಗೂ ಕರ್ತವ್ಯ ಲೋಪ ಎಸಗಿದ ಚುನಾವಣೆ ಶಿರಸ್ತೆದಾರ್ ವಿರುದ್ಧ ಕಟ್ಟುನಿಟ್ಟಿನ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಪ್ರಸ್ತುತ ಗಂಗಾವತಿ ತಾಲೂಕಿಗೆ ನೂತನ ತಹಶೀಲ್ದಾರ್ ಆಗಿ ಅಧಿಕಾರ ವಹಿಸಿಕೊಂಡಿರುವ ವಸಂತಕುಮಾರಿ ಅವರು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದು, ಕಚೇರಿ ಆವರಣದಲ್ಲೇ ಇರುವ ಈ ದೂಳು ಹಿಡಿದ ಅವ್ಯವಸ್ಥೆಯ ವಿರುದ್ಧ ಸೂಕ್ತ ಹಾಗೂ ಕಠಿಣ ಕ್ರಮ ಕೈಗೊಳ್ಳಲಿದ್ದಾರೆ ಎನ್ನುವ ಭರವಸೆ ಸಾರ್ವಜನಿಕರಲ್ಲಿದೆ. ಒಂದು ವೇಳೆ ಈ ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ನೂತನ ತಹಶೀಲ್ದಾರರು ತಕ್ಷಣ ಕ್ರಮ ಕೈಗೊಳ್ಳದಿದ್ದರೆ, ಮುಂಬರುವ ದಿನಗಳಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಶಾಸಕರಿಗೆ ಲಿಖಿತ ದೂರು ನೀಡುವುದರ ಜೊತೆಗೆ ಕಚೇರಿ ಮುಂಭಾಗದಲ್ಲೇ ಪ್ರತಿಭಟನೆ ನಡೆಸುವುದಾಗಿ ಸಾರ್ವಜನಿಕರು ಹಾಗೂ ಹೋರಾಟಗಾರರು ಎಚ್ಚರಿಸಿದ್ದಾರೆ.

# ಲೇಖಕರ ದಿನಚರಿ...

'ಶೂನ್ಯಾಧಿಪತಿ' ಅಲ್ಲಮನೆಂದರೆ

## ಅಲ್ಲಮನೆಂದರೆ..?

ಎನ್ನ ದನಿ ತಡವರಿಸಿ ಗದ್ಗದಿತ!
ಎನ್ನ ಮನ ಬೆದರಿ ದಿಗ್ಭ್ರಾಂತ!
ಒಮ್ಮೆಲೇ ಚಳಿಜ್ವರ ಬಂದಂತೆ ಭಾಸ!
ಈ ಭಾವಕೆ ಕಾರಣನಾದ 'ಅಲ್ಲಮ'ನಾರು?

ಅಲ್ಲಮನೆಂದರೆ 'ಬಯಲು'
ಅಲ್ಲಮನೆಂದರೆ 'ವೈರಾಗ್ಯ'
ಅಲ್ಲಮನೆಂದರೆ 'ಅರಿವು'
ಅಲ್ಲಮನೆಂದರೆ 'ಶೂನ್ಯ'
ಈ ಅಲ್ಲಮನು 'ಪ್ರಭುದೇವ"ಆದದ್ದು
ಹೇಗೆ?




ಗೊಗ್ಗಯ್ಯನೊಂದಿಗೆ ಮಾತಿಗಿಳಿದ
ಅಲ್ಲಮ,"ನೀನು ಬಹಿರಂಗ ಕೃಷಿಕ
ನಾನು ಅಂತರಂಗ ಕೃಷಿಕ"
ಎನುವಾಗಲೆ ಕರಕೆ ತಾಕಿತು 'ಹೆಂಟೆ'!
ಅಗೆದು ನೋಡಿದರೆ ಅನಿಮಿಷನ ಗವಿ,
ಆ ಗವಿಯಲಿ ಚುಳಕಾದ ಲಿಂಗ!
ಆ ಲಿಂಗ ಸ್ಪರ್ಶದಿ ಗುಹೇಶ್ವರನ ಕಂಡ
ಅಲ್ಲಮ 'ಪ್ರಭುದೇವ'ರಾಗಿಬಿಟ್ಟರು!
ಈ ಪ್ರಭುದೇವರು 'ಶೂನ್ಯಪೀಠ'ಸಿಂಗರಿಸಿದ್ಧೇಗೆ?

ವೈರಾಗ್ಯಮೂರ್ತಿ ಪ್ರಭುದೇವರು
ಬಸವ ಕಲ್ಯಾಣಕೆ ಆಗಮಿಸಲು
ಊರೆಲ್ಲಾ ಹರಿಯಿತು ಬೆಳಕಿನ ಹೊನಲು,
ಆ ಹೊನಲಲಿ ಮಿಂದೆದ್ದ ಬಸವಾದಿ ಶರಣರು,'ಅಲ್ಲಮರ ಅರಿವೇ'
'ಶೂನ್ಯಪೀಠ'ಕೆ 'ಸಿಂಗಾರ'ವೆಂದು ಘೋಷಿಸಲು
'ಸಮಾನತೆ' ಹೊರಟಿತು ದಿಬ್ಬಣದಿ
'ಸಂಭ್ರಮ' ಮೂಡಿತು ಬಯಲಿನಲಿ!

ಆದರೇಕೆ ನನ್ನಲಿ 'ಅಲ್ಲಮ'ನೆಂದರೆ
ಚಳಿಜ್ವರದ ಭಾಸ? ಕೇಳುವ ಕೌತುಕವೆ
ನಿಮಗೆ,ಹೇಳುವೆನು ಕೇಳಿ
ಎನ್ನಯ ಬಯಲಿನ ಬದುಕಲಿ
21 ನೇ ಶತಮಾನದ ಅಂಕಿಗಳು
ತಮ್ಮಯ ಮಗ್ಗಲು ಬದಲಿಸಿವೆ!
12 ನೇ ಶತಮಾನದ ಅನುಭವ ಮಂಟಪ'
ದ ಅಪ್ಪಟ ಶಿಷ್ಯೆಳಾಗಿದ್ದೇನೆ ನಾನೀಗ!

'ಬಸವಣ್ಣ'ನೇ ಎನ್ನಯ ಕ್ಲಾಸ್ ಟೀಚರ್!
'ಶರಣರೆ' ಎನ್ನಯ ಸಬ್ಜೆಕ್ಟ್ ಟೀಚರ್ಸ್
'ಅಲ್ಲಮ'ನೆ ಎನ್ನಯ ಹೆಡ್ ಮಾಸ್ಟರ್!



ಡಿ.ಶಬ್ರಿನಾ ಮಹಮದ್ ಅಲಿ, ಚಳ್ಳಕೆರೆ.

## 'ಮನದ ಮಳೆ'



ತುಂತುರು ಹನಿಯಂತೆ ನೆನಪುಗಳ ಓಕುಳಿ ಮನದ
ಅಂಗಳದಲಿ ತಂಗಾಳಿಯ ಕಚಗುಳಿ; ನವಿರಾದ ಭಾವಕೆ
ಮೂಡಿದಂತೆ ಹಸಿರು ಕಣ್ಣಂಚಲಿ ಅರಳಿದೆ ಪ್ರೀತಿಯ ಕೊನರು

ಕಾರ್ಮೋಡದಂತೆ ಮುಸುಕಿದ ಮೌನ, ಕಂಬನಿ ರೂಪದಿ
ಸುರಿಯಿತು ಈ ದಿನ ನೋವಿನ ಧಗೆಯಲಿ ನಿತ್ಯ ಕೊರಗಲು
ಭರವಸೆಯ ಬೆಳಕು ಮೂಡುವ ಕಾತುರ

ವರುಣನಿಗಿಲ್ಲ ಎಂದಿಗೂ ಆಗಸದ ಹಂಗು ಪ್ರಕೃತಿಯ
ರಮಿಸಲು ಒಲವಿನ ಗುಂಗು ತಣಿಸುತಲಿ ಜೀವಸಂಕುಲಗಳ
ಸಂತತಿ ಮೈಮರೆಸಿ ನೀಡಿದೆ ಮನಸಿಗೆ ಶಾಂತಿ



ವಸಂತ ವಸು.

## ಮನಸ್ಸು ಮಂಗನಂತೆ..!?



ಮಾನವನ ಜೀವನದಲ್ಲಿ ಅತಿ ವಿಚಿತ್ರವಾದದ್ದು ಏನಾದರೂ ಇದ್ದರೆ ಅದು ಅವನ ಮನಸ್ಸು. ದೇಹವನ್ನು ಹಿಡಿದುಕೊಳ್ಳುವುದು ಸುಲಭ; ಆದರೆ ಮನಸ್ಸನ್ನು ಹಿಡಿದುಕೊಳ್ಳುವುದು ಅಷ್ಟು ಸುಲಭವಲ್ಲ. ಅದಕ್ಕೆ ಕಾರಣ ಮನಸ್ಸು ಮರ್ಕಟ! ಮಂಗ ಒಂದು ಮರದಿಂದ ಮತ್ತೊಂದು ಮರಕ್ಕೆ ಹಾರಿ ಹಾರಿ ಆಟವಾಡುವಂತೆ, ನಮ್ಮ ಮನಸ್ಸು ಕೂಡ ಒಂದು ಆಲೋಚನೆಯಿಂದ ಮತ್ತೊಂದು ಆಲೋಚನೆಗೆ ಹಾರಾಡುತ್ತಲೇ ಇರುತ್ತದೆ.

ಬೆಳಿಗ್ಗೆ ಎದ್ದು ಓದಲು ಕುಳಿತಾಗ ಮನಸ್ಸು ಹೇಳುತ್ತದೆ."ಇಂದು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳೋಣ, ನಾಳೆಯಿಂದ ಓದೋಣ." ನಾಳೆ ಬಂದಾಗ ಮತ್ತೆ ಅದೇ ಕಥೆ! ಈ ರೀತಿ ಮನಸ್ಸು ನಮ್ಮನ್ನು ಮಂಗದಂತೆ ಕುಣಿಸುತ್ತದೆ. ಅಮ್ಮ ಕೂಗಿ "ಓದು!" ಎಂದು ಹೇಳಿದರೆ, ಮನಸ್ಸು ತಕ್ಷಣ ಕಿಟಕಿ ಕಡೆಗೆ ಓಡಿ ಹೋಗಿ ಹೊರಗಿನ ಗಿಡಮರ, ಪಕ್ಷಿ, ರಸ್ತೆ, ಹೀಗೆ ಎಲ್ಲವನ್ನೂ ನೋಡಲು ಪ್ರಾರಂಭಿಸುತ್ತದೆ. ಪುಸ್ತಕದ ಅಕ್ಷರಗಳು ಮಾತ್ರ ಅದಕ್ಕೆ ಕಣ್ಮರೆ! ಮಂಗನನ್ನು ನಾವು ನೋಡಿಲ್ಲವೇ? ಅದು ಒಂದೇ ಸ್ಥಳದಲ್ಲಿ ಸುಮ್ಮನೆ ಕೂತುಕೊಳ್ಳುವುದೇ ಇಲ್ಲ. ಕಾಯಿ ಕಂಡರೆ ಕಾಯಿ, ಹಣ್ಣು ಕಂಡರೆ ಹಣ್ಣು ಹೀಗೆ ಎಲ್ಲವನ್ನೂ ಪರೀಕ್ಷೆ ಮಾಡಬೇಕು. ನಮ್ಮ ಮನಸ್ಸು ಕೂಡ ಹಾಗೆಯೇ. ಮೊಬೈಲ್ ನೋಡಬೇಕು, ಹಾಡು ಕೇಳಬೇಕು, ಸ್ನೇಹಿತನ ಜೊತೆ ಮಾತನಾಡಬೇಕು,ಚಾಟ್ ಮಾಡಬೇಕು, ಡಿಜಜಟ ನೋಡಬೇಕು, ಇನ್ನೇನು ಬೇಕಾದರೂ ಮಾಡಬೇಕು ಆದರೆ ಓದಲು ಅಥವಾ ಕೆಲಸ ಮಾಡಲು ಬಂದಾಗ ಮಾತ್ರ ಮನಸ್ಸು ಸ್ವಲ್ಪ ದೂರವೇ ನಿಂತುಕೊಳ್ಳುತ್ತದೆ! ಒಮ್ಮೆ ನಾನು ಓದಲು ಕುಳಿತಿದ್ದೆ. ಮುಂದೆ ಪುಸ್ತಕ, ಕೈಯಲ್ಲಿ ಪೆನ್. ಆದರೆ ಮನಸ್ಸು ಮಾತ್ರ ಅಡುಗೆಮನೆಯ ಕಡೆಗೆ ಓಡಿಹೋಗಿತ್ತು. ಅಲ್ಲಿ ಅಮ್ಮ ಮಾಡಿದ ದೋಸೆಗಳ ಸುಗಂಧ! ತಕ್ಷಣ ಮನಸ್ಸು ಹೇಳಿತು "ಮೊದಲು ದೋಸೆ ತಿನ್ನೋಣ, ನಂತರ ಓದೋಣ." ದೋಸೆ ತಿಂದ ಮೇಲೆ ಮನಸ್ಸು ಮತ್ತೆ ಹೊಸ ಆಲೋಚನೆ "ಇಷ್ಟು ಹೊತ್ತು ಓದಿಲ್ಲ, ಸ್ವಲ್ಪ ನಿದ್ರೆ ಮಾಡೋಣ." ಹೀಗೆ ನೋಡಿದರೆ, ಮನಸ್ಸು ನಮ್ಮನ್ನು ನಾಟ್ಯ ಮಾಡಿಸುತ್ತದೆ. ಮರದ ಮೇಲಿಂದ ಮರಕ್ಕೆ ಹಾರುವ ಮಂಗ, ಆಲೋಚನೆಯ ಮೇಲಿಂದ ಆಲೋಚನೆಗೆ ಹಾರುವ ಮನಸ್ಸು.

ಹಣ್ಣು ಕಂಡ ಮಂಗದ ಕಣ್ಣು ಮಿನುಗುವಂತೆ,ಹೊಸ ಕಲ್ಪನೆ ಕಂಡ ಮನಸ್ಸು ಕುಣಿಯುತ್ತದೆ. ಆದರೆ ಮಂಗನಂತೆ ಇರುವ ಮನಸ್ಸು ಕೇವಲ ಸಮಸ್ಯೆ ಮಾತ್ರವಲ್ಲ; ಕೆಲವೊಮ್ಮೆ ಅದು ಸುಂದರವಾದ ಕಲ್ಪನೆಗಳನ್ನೂ ಕೊಡುತ್ತದೆ. ಕವಿ, ಕಲಾವಿದ, ವಿಜ್ಞಾನಿ ಈ ಎಲ್ಲರಿಗೂ ಹೊಸ ಆಲೋಚನೆಗಳು ಮನಸ್ಸಿನ ಈ ಹಾರಾಟದಿಂದಲೇ ಬರುತ್ತವೆ. ಒಂದು ಕ್ಷಣ ಆಕಾಶದ ಬಗ್ಗೆ ಯೋಚಿಸಿದ ಮನಸ್ಸು, ಮತ್ತೊಂದು ಕ್ಷಣ ನಕ್ಷತ್ರಗಳ ಕಡೆಗೆ ಹಾರುತ್ತದೆ. ಅಲ್ಲಿ ಹುಟ್ಟುವ ಕಲ್ಪನೆಗಳು ಹೊಸ ಕವಿತೆ, ಹೊಸ ಆವಿಷ್ಕಾರಗಳಾಗಿ ರೂಪುಗೊಳ್ಳುತ್ತವೆ.

ಮನಸ್ಸು ಸಂಪೂರ್ಣ ಮಂಗನಂತೆ ಅಡ್ಡಾಡುತ್ತಿದ್ದರೆ ಜೀವನದಲ್ಲಿ ಗೊಂದಲವೇ ಹೆಚ್ಚು. ಆದ್ದರಿಂದ ಅದನ್ನು ಸ್ವಲ್ಪ ತರಬೇತಿ ಕೊಡಬೇಕು. ಹೇಗೆಂದರೆ, ಮಂಗನನ್ನು ತರಬೇತಿ ನೀಡಿ ಆಟ ತೋರಿಸುವಂತೆ, ನಾವು ನಮ್ಮ ಮನಸ್ಸನ್ನೂ ಅಭ್ಯಾಸದಿಂದ ನಿಯಂತ್ರಿಸಬೇಕು. ಧ್ಯಾನ, ಒಳ್ಳೆಯ ಪುಸ್ತಕ ಓದು, ನಿಯಮಿತ ಕೆಲಸ ಇವೆಲ್ಲವೂ ಮನಸ್ಸನ್ನು ಶಾಂತಗೊಳಿಸುವ ಮಾರ್ಗಗಳು.ಒಬ್ಬ ಗುರು ಹೇಳಿದ ಮಾತು ನೆನಪಾಗುತ್ತದೆ: "ಮನಸ್ಸು ಒಂದು ಕಾಡುಮಂಗ. ಅದನ್ನು ಓಡಿಸಬೇಡ; ನಿಧಾನವಾಗಿ ಸ್ನೇಹ ಮಾಡು." ಅಂದರೆ, ಮನಸ್ಸನ್ನು ಬಲವಂತವಾಗಿ ಹಿಡಿಯಲು ಪ್ರಯತ್ನಿಸಿದರೆ ಅದು ಇನ್ನಷ್ಟು ಓಡುತ್ತದೆ. ಆದರೆ ಅದನ್ನು ಅರ್ಥ ಮಾಡಿಕೊಂಡು ಸರಿಯಾದ ದಾರಿಯಲ್ಲಿ ನಡೆಸಿದರೆ ಅದು ನಮ್ಮ ಗೆಳೆಯವಾಗುತ್ತದೆ.

ನಮ್ಮ ಜೀವನದ ಯಶಸ್ಸು ಕೂಡ ಮನಸ್ಸಿನ ಮೇಲೆ ಅವಲಂಬಿತವಾಗಿದೆ. ಮನಸ್ಸು ಶಾಂತವಾಗಿದ್ದರೆ ನಾವು ಯಾವುದೇ ಕೆಲಸವನ್ನು ಚೆನ್ನಾಗಿ ಮಾಡಬಹುದು. ಆದರೆ ಮನಸ್ಸು ಮಂಗನಂತೆ ಇಡೀ ಸಮಯ ಕುಣಿಯುತ್ತಿದ್ದರೆ ಗಮನವೇ ಕೇಂದ್ರೀಕರಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವು ನಮ್ಮ ಮನಸ್ಸನ್ನು ನಿಧಾನವಾಗಿ ಶಿಸ್ತುಗೊಳಿಸಬೇಕು. ಕೊನೆಯಲ್ಲಿ ಹೇಳಬೇಕಾದರೆ ಮನಸ್ಸು ಮಂಗನಂತೆ ಹಾರಾಡುವುದು ಮಾನವನ ಸ್ವಭಾವವೇ. ಆದರೆ ಆ ಮಂಗನಿಗೆ ಸರಿಯಾದ ದಾರಿ ತೋರಿಸಿದರೆ ಅದು ನಮ್ಮ ಜೀವನವನ್ನು ಸುಂದರಗೊಳಿಸುತ್ತದೆ. ಮನಸ್ಸು ಮಂಗನಾದರೂ ಮನದಾಳದಲ್ಲಿ ಮಧುರತೆ, ಸರಿಯಾದ ದಾರಿ ಕಂಡರೆ ಅದೇ ಜೀವನದ ಸುಖಸಂಪತ್ತು.ಹೀಗಾಗಿ ಮನಸ್ಸು ಮಂಗನಂತೆ ಹಾರಾಡುತ್ತಿದ್ದರೂ ಅದನ್ನು ಸ್ನೇಹಿತನಂತೆ ನೋಡಿಕೊಂಡು, ಸರಿಯಾದ ದಾರಿಗೆ ನಡೆಸಿದರೆ ಜೀವನವೂ ಸಂತೋಷಕರ ಆಗಬಹುದು ಅಲ್ಲವೇ? ನೀವೇನಂತೀರಿ..?




ಪ್ರೇಮಾ ಶೆಟ್ಟಿ.

## ಸಮಾನತೆಯ ಹರಿಕಾರ ಕುದ್ಮುಲ್ ರಂಗರಾವ್

ಸಮಾಜದಲ್ಲಿ ಸಮಾನತೆ ಸ್ಥಾಪನೆಯಾಗಬೇಕೆಂದು ಸರ್ವ ಜನಾಂಗದವರು ಒಂದು ಎಂಬ ಭಾವನೆ ಹೊಂದಿ ಸಕಲರು ವರ್ಗ ಭೇದ, ವರ್ಣ ಭೇದ , ಜಾತಿ ಭೇದ ಮರೆತು ನಾವು ಎಲ್ಲರೂ ಮನುಷ್ಯರು ಜಗತ್ತಿನಲ್ಲಿ ಇರುವುದು ಒಂದೇ ಕುಲ. ಅದು ಮನುಜ ಕುಲಂ ಎಂದು ತಿಳಿಯುವುದು ಅಗತ್ಯ. ಆ ರೀತಿಯ ಜಾಗೃತಿ ಹೋರಾಟಗಳು ನಿರಂತರವಾಗಿ ನಡೆದಿವೆ. ಅದೆಷ್ಟೇ ಹೋರಾಡಿದರೂ ಸಮಾಜದಲ್ಲಿ ಸಂಪೂರ್ಣ ಸಮಾನತೆ ಸ್ಥಾಪನೆಯಾಗಿಲ್ಲವೆಂಬುದು ವಾಸ್ತವ ಸತ್ಯದ ವಿಚಾರ.

ಸಮಾಜದಲ್ಲಿ ಸಮಾನತೆ ಕಾಪಾಡಲು, ಸರ್ವರೂ ಸಮಭಾವದಿಂದ ಬಾಳುವಂತಾಗಲಿ ಕೆಳಸ್ಥರದ ಜನಾಂಗದವರು ಶಿಕ್ಷಣ ಪಡೆದು ಉದ್ಯೋಗವಂತರಾಗಲಿ ಸಂಸ್ಕಾರ ಪಡೆಯಲಿ ಎಂಬಿತ್ಯಾದಿ ಆಶಯಗಳನ್ನು ಇಟ್ಟುಕೊಂಡು ಈ ಹಿಂದೆ ಅನೇಕ ಮಹನೀಯರು ಪ್ರಾಮಾಣಿಕವಾಗಿ ಹೋರಾಟ ಮಾಡಿದ್ದಾರೆ. ಸಮ ಸಮಾಜದ ಸ್ಥಾಪನೆಗೆ ತಮ್ಮದೇ ಆದ ಕೊಡುಗೆ ನೀಡಿರುವದನ್ನು ನಾವು ಇತಿಹಾಸದಲ್ಲಿ ಕಾಣಬಹುದು. ಈ ನಿಟ್ಟಿನಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ , ಶಾಹು ಮಹಾರಾಜ್ , ನಾರಾಯಣ ಗುರು, ಜ್ಯೋತಿಬಾ ಪುಲೆ, ಮಹಾತ್ಮ ಗಾಂಧೀಜಿ ಮುಂತಾದವರ ಪ್ರಯತ್ನ ಸದಾ ಮೆಚ್ಚುವಂತದ್ದು.

ಇದೇ ಮಾದರಿಯಲ್ಲಿ ಸಮ ಸಮಾಜದ ಸ್ಥಾಪನೆಗೆ ಹೋರಾಟ ಮಾಡಿದ ಇನ್ನೊರ್ವ ಅಪರೂಪದ ಹೋರಾಟಗಾರರು, ಸಮಾಜ ಪರ ಚಿಂತನ ಉಳ್ಳವರು ಕುದ್ಮುಲ್ ರಂಗರಾವ್. ಇವರು 1859 ಜೂನ್ 29 ರಂದು ಅಂದಿನ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದ ಕಾಸರಗೋಡು ಬಳಿಯ ಕುದ್ಮುಲ್ ಎಂಬ ಪುಟ್ಟ ಗ್ರಾಮದಲ್ಲಿ ದೇವಪ್ಪಯ್ಯ ಹಾಗೂ ಗೌರಿ ದಂಪತಿಗಳ ಮಗನಾಗಿ ಜನಿಸಿದರು. ಸಂಸ್ಕಾರವಂತ ಕುಟುಂಬದಲ್ಲಿ ಜನಿಸಿದ




ಇವರು ಬಾಲ್ಯದಿಂದಲೇ ನಾಯಕತ್ವ ಗುಣ ಬೆಳೆಸಿಕೊಂಡವರು. ಚುರುಕತನದ ವ್ಯಕ್ತಿತ್ವ ಇವರದು ಆಗಿದೆ. ಬೆಳೆ ಬೆಳೆಯುತ್ತಾ ಸಮಾಜದ ಸಮಾನತೆ ಬಗ್ಗೆ ಚಿಂತಿಸುತ್ತಾ ಸಮಸಮಾಜದ ಸ್ಥಾಪನೆಗೆ ತಮ್ಮ ಕೈಲಾದ ಪ್ರಯತ್ನ ಹೋರಾಟ ಮಾಡಬೇಕೆಂದು ನಿರ್ಧಾರ ಮಾಡಿದರು. ಸಮಾಜದಲ್ಲಿ ನಡೆಯುತ್ತಿರುವ ಜಾತಿಯತೇ ಕುರಿತು ತುಂಬಾ ನೊಂದುಕೊಂಡು ಈ ವ್ಯವಸ್ಥೆ ಸರಿಪಡಿಸಲು ಹೋರಾಟ ಮಾಡಿದರು.

ಬಡವರ, ದಲಿತರ, ಹಿಂದುಳಿದ ಜನಾಂದವರ ಏಳ್ಗೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಪ್ರಗತಿಗೆ ವಿದ್ಯೆಯೇ ಮೂಲ ಎಂದು ಅರಿತು ಹಿಂದುಳಿದ ಮಕ್ಕಳು ವಿದ್ಯಾವಂತರಾಗಬೇಕೆಂದು ಶೋಷಿತ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಗಳನ್ನು ಸ್ಥಾಪಿಸಿದರು. ಅವರ ನಡೆ ಅನೇಕರು ಟೀಕಿಸಿದರು. ಇವರಿಗೆ ಅಪಮಾನ ಮಾಡಿದರು . ಅವಮಾನ ಮಾಡಿದರೂ ಆದರೆ ಇವರ ಗುರಿ ಆಲೋಚನೆ ದಿಟ್ಟವಾಗಿ-ತ್ತು. ಒಂದು ಉದಾತ್ತ ಚಿಂತನೆ ಇಟ್ಟುಕೊಂಡು ಹೋರಾಟವಾಗಿ ಏಳು ಬೀಳು ನೋವು ನಲಿವುಗಳು ಅವಮಾನ ಸನ್ಮಾನಗಳು ಸಹಜ.

ಆದರೆ ಇವರು ಇವುಗಳನ್ನು ಸಮಭಾವದಿಂದ ಸ್ವೀಕರಿಸಿದರು. ಬಡ ದಲಿತ ಮಕ್ಕಳಿಗಾಗಿ ಹಾಸ್ಟೆಲ್ ಗಳನ್ನು ಸ್ಥಾಪಿಸಿದರು. ಮಂಗಳೂರಿನ ಸುತ್ತಲಿನ ಪ್ರದೇಶಗಳಾದ ಕಂಕನಾಡಿ, ಮೂಲ್ಕಿ. ಬೋಳೂರ, ಉಡುಪಿ, ಬನ್ನಂಜೆ , ನೇಜಾರು, ಅತ್ತಾವರ ಮುಂತಾದ ಕಡೆ ಶಾಲೆ ಹಾಸ್ಟೆಲು ಸ್ಥಾಪಿಸಿ ಶೈಕ್ಷಣಿಕ ಕ್ರಾಂತಿಗೆ ಕಾರಣವಾದರು. ಸರ್ವರೂ ಸಮಾನರು ಎಂಬ ಉದ್ದೇಶ ಇಟ್ಟುಕೊಂಡು ಜನಜಾಗೃತಿ ಸಭೆಗಳನ್ನು ಮಾಡಿದರು. ಹುಟ್ಟಿದ್ದು ಉನ್ನತ ವರ್ಗದಲ್ಲಾದರೂ ಬದುಕು ಸವೆಸಿದ್ದು ಕೆಳವರ್ಗದ ಜನರ ಉದ್ದಾರಕ್ಕಾಗಿ ಎಲ್ಲರಿಗೂ ಶಿಕ್ಷಣ ಸಿಗಬೇಕು. ಎಲ್ಲರೂ ಮನುಷ್ಯರೇ. ನಾವು ಸೇವಿಸುವ ಗಾಳಿ ಒಂದು, ನಾವು ಕುಡಿಯುವ ನೀರು ಒಂದು. ಸೇವಿಸುವ ಗಾಳಿ ಒಂದು ಹೀಗಿರುವಾಗಿ ನಮ್ಮ ನಮ್ಮ ನಡುವೆ ಅಸಮಾನತೆ ಗೋಡೆಯನ್ನು ಕಟ್ಟಿಕೊಳ್ಳದೇ ಸಮಾನತೆಯ ಸೇತುವೆಯನ್ನು ಕಟ್ಟಿಕೊಳ್ಳಬೇಕು ಎಂದು ಅವಿರತವಾಗಿ ಶ್ರಮಿಸಿದರು. ಜೀತಪದ್ಧತಿಯನ್ನು ಬಲವಾಗಿ ವಿರೋಧಿಸಿದ ಇವರು ನೂರಾರು ಜೀತದ ಆಳುಗಳನ್ನು ಬಲಾಢ್ಯರ ಕಪಿಮುಷ್ಠಿಯಿಂದ ಬಿಡಿಸಿ ಸ್ವತಂತ್ರ ಜೀವನ ನಡೆಸಲು ಕಾರಣರಾದರು.

ದಲಿತರಿಗಾಗಿ ವೃತ್ತಿಪರ ಶಿಕ್ಷಣ ನೀಡಲು ಶೇಡಿಗುಡ್ಡೆ ಎಂಬಲ್ಲಿ ಕೈಗಾರಿಕಾ ತರಬೇತಿ ಶಾಲೆ , ಡಿ.ಸಿ ಎಂ ಮಿಶಲ್ ಶಾಲೆ ಸ್ಥಾಪಿಸಿದರು. ಇದಲ್ಲದೇ ಹಿಂದುಳಿದ ಜನಾಂಗದವರು ಸ್ವಾವಲಂಬೀ ಜೀವನ ನಡೆಸಲೆಂದು ಬಡಗಿ, ನೇಯ್ಗೆ, ಕಸೂತಿ, ತೋಟಗಾರಿಕೆ, ರೇಷ್ಮೆ ಹುಳು ಸಾಕಾಣಿಕೆ ಇನ್ನಿತರ ಸ್ವುದ್ಯೋಗ ಮಾಡಲು ಪೂರಕವಾಗಿ ತರಬೇತಿ ನೀಡಿಸಿದರು. ಇದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಜನಾಂಗದವ-ರಿಗೆ ಕೋರ್ಟ್ ಗುಡ್ಡೆ ಬಳಿ ನೂರಾರು ಸಾಲು ಸಾಲು ಮನೆಗಳನ್ನು ಕಟಿಸಿ ಬಡವರ ಪಾಲಿಗೆ ಆಶಾಕಿರಣವಾದರು. ಸರ್ವರೂ ಸಮಾನ ಎಂಬ ಭಾವವೇ ಮುಖ್ಯ ಎಂದು ನಡೆದರು.

ಇವರು ಒಂದೆಡೆ ಹೀಗೆ ಹೇಳುವರು. ನನ್ನ ಶಾಲೆಯಲ್ಲಿ ಕಲಿತ ದಲಿತ ಜನಾಂಗದ ಮಕ್ಕಳು ವಿದ್ಯಾವಂತರಾಗಿ ,ದೊಡ್ಡವರಾಗಿ,ಸರ್ಕಾರಿ ನೌಕರಿಗೆ ಸೇರಿ ನಮ್ಮೂರ ರಸ್ತೆಗಳಲ್ಲಿ ಕಾ-ರಿನಲ್ಲಿ ಓಡಾಡಬೇಕು. ಆಗ ರಸ್ತೆಯಲ್ಲಿ ಏಳುವ ಧೂಳು ನನ್ನ ತಲೆಗೆ ತಾಗಬೇಕು . ಆಗ ನನ್ನ ಜನ್ಮ ಸಾರ್ಥಕವಾಗಬೇಕು ಎಂದು ಹೇಳಿದರು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಅಬಲೆಯರ, ವಿಧವೆಯರ ವಿದ್ಯಾಭ್ಯಾಸಕ್ಕಾಗಿ ಆಶ್ರಮ ಶಾಲೆಗಳನ್ನು ಸ್ಥಾಪಿಸಿದರು. ಅಂತರಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿದರು.

ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾದ ಜನರಿಗೆ ಕುದ್ಮುಲ್ ರಂಗರಾವ್ ಸ್ವಾಭಿಮಾನ ಬದುಕು ನಡೆಸಲು ಪ್ರೇರಣೆ ನೀಡಿದರು. ದಲಿತರು ವಿದ್ಯಾವಂತರಾಗಬೇಕು. ಹಿಂದುಳಿದವರು ಶಿಕ್ಷಣವಂತರಾಗಬೇಕು. ಅವರು ಕೀಳರಿಮೆ ತೊರೆದು ಸ್ವಾಭಿಮಾನದ ಬದುಕು ನಡೆಸಬೇಕು. ಎಲ್ಲರೂ ಸಮಾನರು ಸಮಾನತೆ ಸ್ಥಾಪನೆಗಾಗಿ ಪ್ರಾಮಾಣಿಕವಾಗಿ ಹೋರಾಟ ನಡೆಸಿದ ಅಪರೂಪದ ನಾಯಕ ಕುದ್ಮುಲ್ ರಂಗರಾವ್.



ರಂಗನಾಥ ಎನ್ ವಾಲ್ಮೀಕಿ

## ಕಾಲದ ಕನ್ನಡಿಯಲ್ಲಿ ಅವಳು

**ಅವಳು ಎಂಬ ಪದದ ಅರ್ಥ ಅನಂತ. ಕಾಲದ ಕನ್ನಡಿಯಲ್ಲಿ ನೋಡಿದಾಗ, ಅವಳ ರೂಪವು ಯುಗಯುಗಗಳಿಂದ ಬದಲಾಗುತ್ತಾ, ಬೆಳೆಯುತ್ತಾ ಬಂದಿದೆ. ಸಮಾಜದ ಚರಿತ್ರೆಯ ಪ್ರತಿಯೊಂದು ಹಂತದಲ್ಲೂ ಅವಳು ವಿಭಿನ್ನ ಪಾತ್ರಗಳನ್ನು ನಿಭಾಯಿಸಿದ್ದಾಳೆ. ಮೌನದಲ್ಲಿ ನೋವನ್ನು ಹೊತ್ತ ತಾಯಿಯಾಗಿ, ಗಂಡನ ಬೆನ್ನೆಲುಬಾದ ಹೆಂಡತಿಯಾಗಿ, ಅಕ್ಕಳಾಗಿ, ತಂಗಿಯಾಗಿ, ಮತ್ತೊಮ್ಮೆ ಜ್ಞಾನ ದೀಪ ಹಚ್ಚುವ ಗುರುವಾಗಿ ಅವಳು ಅನೇಕ ರೂಪಗಳಲ್ಲಿ ಕಾಣಿಸಿಕೊಂಡಿದ್ದಾಳೆ.**

ಪ್ರಾಚೀನ ಭಾರತದಲ್ಲಿ ಮಹಿಳೆಗೆ ಗೌರವದ ಸ್ಥಾನವಿತ್ತು. ವೇದಕಾಲದಲ್ಲಿ ಗಾರ್ಗಿ, ಮೈತ್ರೇಯಿ ಮೊದಲಾದ ಜ್ಞಾನಿಗಳ ಮೂಲಕ ಮಹಿಳೆಯರ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು. ಆದರೆ ಮಧ್ಯಯುಗದಲ್ಲಿ ಹಲವು ಸಾಮಾಜಿಕ ನಿರ್ಬಂಧಗಳು ಅವಳನ್ನು ಮನೆಯ ಗಡಿಗಳೊಳಗೆ ಸೀಮಿತಗೊಳಿಸಿತು. ಅಕ್ಷರಜ್ಞಾನದಿಂದ ದೂರವಿದ್ದು, ಹಕ್ಕುಗಳಿಲ್ಲದೆ ಬದುಕಿದ ಅವಳ ಬದುಕು ನೋವಿನ ಅಧ್ಯಾಯಗಳನ್ನು ಬರೆಯಲುಯಲು ಶುರು ಮಾಡಿತು.

ಆದರೆ ಕಾಲಚಕ್ರ ಹೀಗೆಯೇ ಇರುತ್ತದೆಯೇ? 19ನೇ ಶತಮಾನದಲ್ಲಿ ಸಮಾಜ, ಸಂಸ್ಕಾರ ಚಳವಳಿಗಳು ಮಹಿಳಾ ಶಿಕ್ಷಣಕ್ಕೆ ದಾರಿ ತೆರೆದವು. ಸಾವಿತ್ರಿಬಾಯಿ ಫುಲೆ ಮಹಿಳಾ ಶಿಕ್ಷಣದ ಮೊದಲ ಹೋರಾಟಗಾರ್ತಿ ಎಂದು ಗುರುತಿಸಿಕೊಂಡರು. ರಾಜಾರಾಮಮೋಹನ ರಾಯ್ ಸತಿಸಹಗಮನ ಪದ್ಧತಿ ವಿರುದ್ಧ ಹೋರಾಡಿ ಮಹಿಳಾ ಗೌರವವನ್ನು ಕಾಪಾಡಲು ಪ್ರಯತ್ನಿಸಿದರು.

ನಂತರ ಡಾ. ಬಿ. ಆರ್. ಅಂಬೇಡ್ಕರ್ ಮಹಿಳೆಯರ ಹಕ್ಕುಗಳ ಪರವಾಗಿ ಸಂವಿಧಾನದಲ್ಲಿ ಸಮಾನತೆ ಸಿದ್ಧಾಂತವನ್ನು ಬಲಪಡಿಸಿದರು. ಇಂದಿನ ಕಾಲದಲ್ಲಿ "ಅವಳು" ಶಿಕ್ಷಣ, ಉದ್ಯೋಗ, ರಾಜಕೀಯ, ವಿಜ್ಞಾನ, ಕಲೆ, ಕ್ರೀಡೆ ಎಲ್ಲ ಕ್ಷೇತ್ರಗಳಲ್ಲೂ ತನ್ನ ಸಾಮರ್ಥ-'ವನ್ನು ಸಾಬೀತುಪಡಿಸಿದ್ದಾಳೆ. ಪಿ ವಿ ಸಿಂಧು ಕ್ರೀಡಾಂಗಣದಲ್ಲಿ ದೇಶದ ಗೌರವ ಹೆಚ್ಚಿಸಿದರೆ,



ಇಂದಿರಾ ಗಾಂಧಿ ರಾಷ್ಟ್ರವನ್ನು ಮುನ್ನಡೆಸಿದ ನಾಯಕಿಯಾಗಿ ಚರಿತ್ರೆಯಲ್ಲಿ ಉಳಿದಿದ್ದಾರೆ. ಈ ಎಲ್ಲ ಸಾಧನೆಗಳು ಕಾಲದ ಕನ್ನಡಿಯಲ್ಲಿ ಅವಳ ಬೆಳವಣಿಗೆಯ ಪ್ರತಿಬಿಂಬಗಳಾಗಿವೆ. ಸಾಹಿತ್ಯ ಮತ್ತು ಕಲೆಗಳಲ್ಲಿಯೂ ಅವಳ ಪ್ರಭಾವ ಸ್ಪಷ್ಟ. ವೈದೇಹಿ ತಮ್ಮ ಬರಹಗಳ ಮೂಲಕ ಮಹಿಳೆಯ ಮನಸ್ಸಿನ ಆಳವನ್ನು ಚಿತ್ರಿಸಿದರೆ, ಸುಧಾಮೂರ್ತಿ ಸರಳ ಜೀವನದ ಮೌಲ್ಯಗಳನ್ನು ಹರಡಿದ್ದಾರೆ.

ಸುನೀತಾ ವಿಲಿಯಮ್ಸ್ ಅವರು ಬಾನಂಗಳಕ್ಕೆ ಕಾಲಿಟ್ಟು ಅದ್ಭುತ ಸಾಧನೆ ಮಾಡಿದ್ದಾರೆ. ಡಿಜಿಟಲ್ ಯುಗದಲ್ಲಿ ಅವಳು ತನ್ನ ಧ್ವನಿಯನ್ನು ಸಾಮಾಜಿಕ ಜಾಲತಾಣಗಳ ಮೂಲಕ ವ್ಯಕ್ತಪಡಿಸುತ್ತಿದ್ದಾಳೆ. ಸ್ವಸಹಾಯ ಸಂಘಗಳು, ಮಹಿಳಾ ಚಳವಳಿಗಳು, ಕಾನೂನು ಜಾಗೃತಿ ಕಾರ್ಯಕ್ರಮಗಳು ಅವಳ ಹೋರಾಟಕ್ಕೆ ಹೊಸ ದಿಕ್ಕನ್ನು ತೋರಿಸುತ್ತಿವೆ. ಈ ಎಲ್ಲ ಸಾಧನೆಗಳು ಕಾಲದ ಕನ್ನಡಿಯಲ್ಲಿ ಅವಳ ಬೆಳವಣಿಗೆಯ ಪ್ರತಿಬಿಂಬಗಳಾಗಿವೆ.

ಆದರೂ ಸವಾಲುಗಳು ಸಂಪೂರ್ಣವಾಗಿ ಅಳಿದು ಹೋಗಿಲ್ಲ. ಲಿಂಗ ಅಸಮಾನತೆ, ಹಿಂಸೆ, ಆರ್ಥಿಕ ಅವಲಂಬನೆ, ತಾರತಮ್ಯ, ಸಾಮಾಜಿಕ ಬಿಕ್ಕಟ್ಟುಗಳು ಇನ್ನೂ ಕೆಲವು ಕಡೆ ಅವಳ ಹೆಜ್ಜೆಗಳನ್ನು ತಡೆಯುತ್ತಿವೆ. ಆದರೆ ಇಂದಿನ "ಅವಳು" ಮೌನವಾಗಿರುವವಳಲ್ಲ. ತನ್ನ ಹಕ್ಕುಗಳಿಗಾಗಿ ಧ್ವನಿ ಎತ್ತುವ ಧೈರ್ಯವುಳ್ಳವಳು. ಶಿಕ್ಷಣ ಮತ್ತು ಡಿಜಿಟಲ್ ಜಾಗೃತಿ ಅವಳಿಗೆ ಹೊಸ ಅವಕಾಶಗಳ ಬಾಗಿಲು ತೆರೆದಿವೆ. ಕಾನೂನು, ಆತ್ಮವಿಶ್ವಾಸ, ಸ್ವಾಭಿಮಾನ ಮತ್ತು ಜ್ಞಾನ ಅವಳನ್ನು ಮುಂದಕ್ಕೆ ಕೊಂಡೊಯ್ಯುತ್ತಿದೆ.

ಒಟ್ಟಾರೆ, ಕಾಲದ ಕನ್ನಡಿಯಲ್ಲಿ ಅವಳು ದುರ್ಬಲೆಯಾಗಿ ಕಾಣಿಸಿಕೊಂಡ ದಿನಗಳಿದ್ದರೂ, ಇಂದು ಅವಳು ಶಕ್ತಿಯ ಪ್ರತಿರೂಪವಾಗಿ ಬೆಳಗುತ್ತಿದ್ದಾಳೆ. ಅವಳು ಕೇವಲ ಕುಟುಂಬದ ಅಸ್ತಿತ್ವವಲ್ಲ. ಸಮಾಜದ ನಿರ್ಮಾಣಶಕ್ತಿ. ಅವಳ ಪ್ರಗತಿ ಸಮಾಜದ ಪ್ರಗತಿ. ಅವಳ ಹೋರಾಟ ದುಃಖದ ಕಥೆಯಲ್ಲ, ಅದು ಶಕ್ತಿಯ ಕಥೆ. ಪ್ರತಿಯೊಂದು ಅಡೆತಡೆಯೂ ಅವಳನ್ನು ಮತ್ತಷ್ಟು ದೃಢಳನ್ನಾಗಿ ಮಾಡಿದೆ. ಅವಳು ಕೇವಲ ಬದುಕಿಗಾಗಿ ಹೋರಾಡಿಲ್ಲ. ಸಮಾನತೆ, ಗೌರವ ಮತ್ತು ಸ್ವಾಭಿಮಾನದ ಬದುಕಿಗಾಗಿ ಹೋರಾಡಿದ್ದಾಳೆ. ಈ ಹೋರಾಟ ಇನ್ನೂ ಮುಂದುವರಿಯುತ್ತಲೇ ಇದೆ. ಆದ್ದರಿಂದ, ಅವಳನ್ನು ಸಮಾನತೆಯಿಂದ ನೋಡುವುದು, ಅವಳ ಕನಸುಗಳಿಗೆ ಬೆಂಬಲ ನೀಡುವುದು ಎಲ್ಲರ ಕರ್ತವ್ಯ. ಕಾಲ ಬದಲಾಗಬಹುದು, ಆದರೆ ಅವಳ ಹೋರಾಟ ಮತ್ತು ಸಾಧನೆಗಳ ಪ್ರತಿಬಿಂಬ ಸದಾಕಾಲವೂ ಕಾಲದ ಕನ್ನಡಿಯಲ್ಲಿ ಹೊಳೆಯುತಲೇ ಇರುತ್ತದೆ.



ನಂದಾದೀಪ ಮಂಡ್ಯ

# ಸಂಗಾಪುರ : ಸರ್ಕಾರಿ ಶಾಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣ

## ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಮಹಾನಾಯಕ ಜನಜಾಗೃತಿ ವೇದಿಕೆಯ ಆಕ್ರೋಶ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತಾಲೂಕಿನ ಸಂಗಾಪುರ ಗ್ರಾಮದ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಉಂಟಾಗಿದ್ದು, ವಿದ್ಯಾರ್ಥಿಗಳು ಹಾಗೂ ಅಡುಗೆ ಸಿಬ್ಬಂದಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಶಾಲೆಯ ಆವರಣದಲ್ಲಿರುವ ಕುಡಿಯುವ ನೀರಿನ ಟ್ಯಾಂಕರ್ ಗೆ ನೀರು ಸರಬರಾಜು ಆಗದೇ ಮಕ್ಕಳಿಗೆ ನೀರು ದೊರೆಯದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಜೊತೆಗೆ ಮಧ್ಯಾಹ್ನದ ಬಿಸಿಯೂಟ ತಯಾರಿಸುವ ಕಾರ್ಯಕ್ಕೂ ನೀರಿನ ಕೊರತೆ ಉಂಟಾಗಿದೆ.**

ಈ ಕುರಿತು ಮಾಹಿತಿ ತಿಳಿದ ಮಹಾನಾಯಕ ಜನಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಎಸ್.ಎಸ್. ಜಂಬಣ್ಣ ಅವರು ಸರಕಾರಿ ಶಾಲೆಗೆ ಭೇಟಿ ನೀಡಿ ಸಮಸ್ಯೆಯನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಯತ್ನಿಸಿದ್ದಾರೆ. ಆದರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ



ಅವರಿಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ದೂರವಾಣಿ ಮೂಲಕ ಕರೆ ಮಾಡಿದಾಗ ಅವರು ಕರೆ ಸ್ವೀಕರಿಸದೇ, ಮರಳಿ ನಂತರ ಮಾತನಾಡುವೆ ಎಂಬ ಸಂದೇಶವನ್ನು ಕಳುಹಿಸಿದ್ದಾರೆ. ಸಂಗಾಪುರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಯಾವುದೇ ಸಮಸ್ಯೆ ಬಗ್ಗೆ ಕರೆ ಮೂಲಕ ತಿಳಿಸಿದರೆ ನಮಗೆ ಸಿಗುವುದು ಸಮಸ್ಯೆಯ ಪರಿಹಾರ ಅಲ್ಲ ನಮಗೆ ಸಿಗುವುದೇ ಒಂದೇ ಸಂದೇಶ ನಾನು ನಂತರ ಕರೆ ಮಾಡುವೇ ಎಂದು ಮರಳಿ ಮೆಸೆಜ್ ಒಂದೇ ಸಿಗುವ ಉತ್ತರ.

ಈ ಸಮಸ್ಯೆ ಕುರಿತು ಸರಕಾರಿ ಶಾಲೆಯ ಮುಖ್ಯ ಶಿಕ್ಷಕರು ಗ್ರಾಮ ಪಂಚಾಯಿತಿಗೆ ಹಲವು ಬಾರಿ ಮನವಿ ಪತ್ರ ಸಲ್ಲಿಸಿ, ಕೆಟ್ಟು ಹೋಗಿರುವ ಟ್ಯಾಂಕರ್ ಅನ್ನು ದುರಸ್ತಿ ಮಾಡಿ ಶಾಲೆಗೆ ಸಮರ್ಪಕವಾಗಿ ನೀರು ಪೂರೈಸುವಂತೆ ಮನವಿ ಮಾಡಿದ್ದಾರೆ. ಆದರೆ ಆ ಮನವಿಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳಲಾಗಿಲ್ಲ ಎಂದು ತಿಳಿದುಬಂದಿದೆ. ಬಳಿಕ ಎಸ್.ಎಸ್. ಜಂಬಣ್ಣ ಅವರು ಶಾಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಜಿಲ್ಲಾಧಿಕಾರಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದು ಜಿಲ್ಲಾಧಿಕಾರಿಗಳು ಒಂದೇ ರಿಂಗ್‌ನಲ್ಲಿ ಕರೆ ಸ್ವೀಕರಿಸಿ ಉತ್ತಮ ಪ್ರತಿಕ್ರಿಯೆ ನೀಡಿದ್ದಾರೆ. ಸಮಸ್ಯೆಯನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದು ಶೀಘ್ರ ಪರಿಹರಿಸುವಂತೆ ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಇದಾದ ನಂತರ ರಾಜ್ಯಾಧ್ಯಕ್ಷರು ನೇರವಾಗಿ ಗ್ರಾಮ ಪಂಚಾಯಿತಿ ಕಚೇರಿಗೆ ತೆರಳಿ ಕಾರ್ಯದರ್ಶಿಯನ್ನು ಭೇಟಿ ಮಾಡಿ ಕೂಡಲೇ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದರು. ಇದಕ್ಕೆ ಸ್ಪಂದಿಸಿದ ಕಾರ್ಯದರ್ಶಿಗಳು ಸಮಸ್ಯೆಯನ್ನು ತುರ್ತಾಗಿ ಪರಿಹರಿಸುವ ಭರವಸೆ ನೀಡಿದ್ದು, ಸಂಬಂಧಪಟ್ಟ ವಾಟರ್‌ಮ್ಯಾನ್ ಅವರನ್ನು ಸ್ಥಳಕ್ಕೆ ಕಳುಹಿಸಿ ದುರಸ್ತಿ ಕಾರ್ಯ ಆರಂಭಿಸಲು ಸೂಚನೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಶಾಲಾ ಮಕ್ಕಳು, ನಮಗೆ ಪಾಠ ಹೇಳಬೇಕಾದ ಶಿಕ್ಷಕರು ಕುಡಿಯುವ ನೀರು ತರಲು ಸಮಯ ಕಳೆಯುವ ಪರಿಸ್ಥಿತಿ ಬಂದಿದೆ. ಇದರಿಂದ ನಮ್ಮ ಶಿಕ್ಷಣಕ್ಕೂ ತೊಂದರೆಯಾಗುತ್ತಿದೆ ಎಂದು ವಿವರಿಸಿದ್ದು ಈ ಸಮಸ್ಯೆಗೆ ಕಾರಣವಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಅವರನ್ನು ಅಮಾನತುಗೊಳಿಸಬೇಕು ಎಂದು ಸಂಘಟನೆಯ ಮೂಲಕ ಆಗ್ರಹಿಸಿದರು.

**1ನೇ ಪುಟದಿಂದ....**

ಪ್ರಶ್ನಿಸಿದಾಗ ಉತ್ತರಿಸಿದ ಪ್ರಿಯಾಂಕ್ ಖರ್ಗೆಯವರು, ನಾನ್ ಬ್ಯಾಕಿಂಗ್ ಫೈನಾನ್?ಸ ಸಂಸ್ಥೆಗಳು (ಎನ್‌ಬಿಎಫ್‌ಸಿ)ಗಳು ಹೊಸ ಕಾನೂನು ಉಲ್ಲಂಘಿಸುತ್ತಿರುವ ಬಗ್ಗೆ ತಮ ಬಳಿ ಮಾಹಿತಿಯಿಲ್ಲ. ಮುಂದಿನವಾರ ಇದಕ್ಕಾಗಿ ಹೊಸ ಪ್ರತ್ಯೇಕ ಸಭೆ ನಡೆಸಿ, ಪರಿಶೀಲಿಸಲಾಗುವುದು ಎಂದರು. ಹೊಸ ಕಾನೂನು ಧರ್ಮಸ್ಥಳದ ಸಂಸ್ಥೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಹಣಕಾಸು ಸಂಸ್ಥೆಗಳು ಅದನ್ನು ಪಾಲನೆ ಮಾಡಬೇಕು ಎಂದು ಹೇಳಿದರು.ಸಂಘ ಸಂಸ್ಥೆಗಳು ವ್ಯಕ್ತಿಗತ ಹಾಗೂ ಧಾರ್ಮಿಕ ದತ್ತಿ ಸಂಸ್ಥೆಗಳು ರಾಜ್ಯ ಸರ್ಕಾರ ಕಾಯ್ದೆ ರೂಪಿಸಿದ ಕಾಯ್ದೆಯನ್ನು ಪಾಲಿಸಲೇಬೇಕು. ಧರ್ಮಸ್ಥಳದ ವಿಚಾರವಾಗಿ ಯಾವ ದೂರಿದೆ, ಆನ್‌ಲೈನ್ ಪೇಮೆಂಟ್ ಬದಲಾಗಿ ನಗದು ರೂಪದಲ್ಲಿ ಹಣ ಪಡೆಯುತ್ತಿರುವ ಕುರಿತು ತಮಗೆ ಮಾಹಿತಿಯಿಲ್ಲ ಎಂದು ಹೇಳಿದರು. ಬಿಟ್‌ಕಾಯಿನ್ ಹಗರಣದಲ್ಲಿ ಜಾರಿ ನಿರ್ದೇಶನಾಲಯ ದೋಷಾರೋಪಣ ಪಟ್ಟಿ ಸಲ್ಲಿಸಿದೆ. ಇದು ತಮ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಸಂಪುಟ ಉಪಸಮಿತಿ ರಚಿಸಲಾಗಿತ್ತು. ಅದಕ್ಕೆ ಡಿ.ಕೆ.ಶಿವಕುಮಾರ್ ಅಧ್ಯಕ್ಷರಾಗಿದ್ದರು. ಈಗ ಸಮಿತಿಯನ್ನು ಪುನರ್‌ರಚಿಸುವ ಅಥವಾ ರದ್ದುಮಾಡಿ ಈಗಾಗಲೇ ಸಿದ್ಧವಾಗಿರುವ ವರದಿಗಳ ಆಧಾರವಾಗಿಯೇ ಕ್ರಮ ತೆಗೆದುಕೊಳ್ಳಬೇಕೇ ಎಂಬ ಕುರಿತು ಮುಖ್ಯಮಂತ್ರಿಯವರು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದರು. ಬೆಂಗಳೂರಿನ ಅಭಿವೃದ್ಧಿಗೆ ಪ್ರತ್ಯೇಕವಾಗಿ 26 ಸಾವಿರ ಕೋಟಿ ರೂ. ಅನುದಾನ ನೀಡುವಂತೆ ಮುಖ್ಯಮಂತ್ರಿಯವರು ಪ್ರಧಾನಿಯವರಿಗೆ ಮನವಿ ಮಾಡಿದ್ದಾರೆ. ಬೆಂಗಳೂರು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ, ದೇಶಕ್ಕೆ ಆರ್ಥಿಕ ಪ್ರಗತಿಯ ಎಂಜಿನ್ ಆಗಿದೆ. ರಾಜ್ಯದ ಒಟ್ಟು ಜಿಡಿಪಿಗೆ ಬೆಂಗಳೂರಿನ ಕೊಡುಗೆ ಶೇ. 40ರಷ್ಟು. ಹೆಚ್ಚಿನ ವಲಸಿಗರು ಇಲ್ಲಿ ನೆಲೆಸಿದ್ದಾರೆ. ಬಂಡವಾಳ ಹರಿದು ಬರುತ್ತಿದೆ. ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ಇದಕ್ಕಾಗಿ ಹೆಚ್ಚಿನ ಅನುದಾನ ಒದಗಿಸಬೇಕು ಎಂದರು. ಕೊಲ್ಲೂರು ಮೂಕಾಂಬಿಕೆ ದೇವಸ್ಥಾನಕ್ಕೆ ಭೇಟಿ ನೀಡುತ್ತಿರುವ ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸುವುದು ಅನಗತ್ಯ. ಮೇಕೆದಾಟು ಯೋಜನೆ ವಿಚಾರವಾಗಿ ಸುಪ್ರೀಂಕೋರ್ಟಿನ ಆದೇಶ ಇದೆ. ನೆರೆಯ ರಾಜ್ಯದ ಮುಖ್ಯಮಂತ್ರಿ ದೇವಸ್ಥಾನಕ್ಕೆ ಬಂದು ದೇವರ ದರ್ಶನ ಪಡೆದು ಹೋಗಲಿ. ಅವರು ಬಂದಾಕ್ಷಣ ನಾವು ನಮ ಹಕ್ಕನ್ನು ಬಿಟ್ಟುಕೊಡುವುದಿಲ್ಲ. ನೆಲ, ಜಲ, ಭಾಷೆ ವಿಚಾರವಾಗಿ ಯಾವುದೇ ರಾಜೀ ಇಲ್ಲ. ನಾವು ನಮ ರಾಜ್ಯದ ಹಿತಾಸಕ್ತಿಗೆ ಬದ್ಧರಾಗಿರುವಂತೆ, ತಮಿಳುನಾಡಿನ ಮುಖ್ಯಮಂತ್ರಿ ಕೂಡ ಕೆಲಸ ಮಾಡುತ್ತಾರೆ. ಅವರಿಗೆ ಅಡ್ಡಿ ಪಡಿಸುವುದು ಸರಿಯಲ್ಲ ಎಂದು ಹೇಳಿದರು. ಬಿಡದಿ ಭೂ ಸ್ವಾಧೀನ ವಿಚಾರವಾಗಿ ವಿರೋಧ ಪಕ್ಷಗಳು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಾಲಕಿ ವೆನ್ನಿಲಾ ಕೊಲೆ ಪ್ರಕರಣದಲ್ಲಿ ಕರ್ತವ್ಯ ಲೋಪವೆಸಗಿದ ಪೊಲೀಸ್ ಇನ್?ಸಪೆಕ್ಟರ್, ಸಬ್ ಇನ್?ಸಪೆಕ್ಟರ್ ಮತ್ತು ರೈಟರ್ ಅವರನ್ನು ಇಂದು ಬೆಳಗ್ಗೆ ಅಮಾನತು ಮಾಡಲಾಗಿದೆ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕವೂ ಕ್ರಮ ಕೈಗೊಳ್ಳದೇ ಲೋಪವೆಸಗಿದ್ದಾರೆ. ಕೊಲೆ ಆರೋಪಕ್ಕಾಗಿ ಬಾಲಕಿಯ ತಾಯಿ ಪ್ರಿಯಾಂಕ ಮತ್ತು ಮೋಹನ್ ಎಂಬ ಆರೋಪಿಯನ್ನು ಬಂಧಿಸಿರುವುದಾಗಿ ತಿಳಿಸಿದರು.

## ಸಾಧಕ ಕೃಷಿಕ ರಾಜೇಂದ್ರ ಭೋಸಲೆ ಅವರಿಗೆ 'ಜೀ ಕನ್ನಡ ನ್ಯೂಸ್ ರಿಯಲ್ ಸ್ಟಾರ್ಸ್' ಪ್ರಗತಿಪರ ರೈತ ಪ್ರಶಸ್ತಿ ಗೌರವ!



ಅ.ಶ. ಸುದ್ದಿ ಮುದ್ದೇಬಿಹಾಳ

**ಮುದ್ದೇಬಿಹಾಳ: ಕೃಷಿಯನ್ನೇ ತಪಸ್ಸಾಗಿಸಿಕೊಂಡು, ಮಣ್ಣಿನಲ್ಲಿ ಚಿನ್ನದ ಬೆಳೆ ತೆಗೆಯುವ ಮೂಲಕ ನಾಲ್ಕು ದಶಕಗಳಿಂದ ಕೃಷಿ ರಂಗದಲ್ಲಿ ಕ್ರಾಂತಿ ಮಾಡಿರುವ ಮುದ್ದೇಬಿಹಾಳದ ಖ್ಯಾತ ಉದ್ಯಮಿ ಹಾಗೂ ಆಧುನಿಕ ಕೃಷಿ ಚಿಂತಕ ರಾಜೇಂದ್ರ ಭೋಸಲೆ ಅವರಿಗೆ ಪ್ರತಿಷ್ಠಿತ 'ಜೀ ಕನ್ನಡ ನ್ಯೂಸ್ ರಿಯಲ್ ಸ್ಟಾರ್ಸ್ ಅವಾರ್ಡ್ 2026' ಪ್ರಗತಿಪರ ರೈತ ಪ್ರಶಸ್ತಿ ಒಲಿದು ಬಂದಿದೆ. ?ಇತ್ತೀಚೆಗೆ ಬೆಂಗಳೂರಿನ ಪ್ರತಿಷ್ಠಿತ 'ಲಲಿತ ಅಶೋಕ' ಹೋಟೆಲ್‌ನಲ್ಲಿ ನಡೆದ ಅತ್ಯಂತ ವೈಭವಯುತ ಸಮಾರಂಭದಲ್ಲಿ ಈ ಗೌರವವನ್ನು ಪ್ರದಾನ ಮಾಡಲಾಯಿತು.**

ಚಿತ್ರರಂಗ ಹಾಗೂ ರಾಜಕೀಯ ರಂಗದ ದಿಗ್ಗಜರ ಸಮ್ಮುಖದಲ್ಲಿ ರಾಜೇಂದ್ರ ಭೋಸಲೆ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು. ?ರಾಜೇಂದ್ರಸಿಂಗ್ ಬಾಬು (ಖ್ಯಾತ ಚಿತ್ರನಿರ್ದೇಶಕರು) ಮುಖ್ಯಮಂತ್ರಿ ಚಂದ್ರು (ಹಿರಿಯ ನಟರು) ಕುಮಾರ್ ಬಂಗಾರಪ್ಪ (ಮಾಜಿ ಸಚಿವರು) ಡಾ. ಜಯಮಾಲಾ (ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರು) ?ರವಿ ಎಸ್. (ಜೀ ನ್ಯೂಸ್ ಸಂಪಾದಕರು) ?ಈ ಅದ್ಧೂರಿ ಸಮಾರಂಭದಲ್ಲಿ ಸ್ಯಾಂಡಲ್‌ವುಡ್ ತಾರೆಯರಾದ ನಟ ಆದಿತ್ಯ ಹಾಗೂ ನಟಿ ರೀಷ್ಮಾ ನಾಣಯ್ಯ ಉಪಸ್ಥಿತರಿದ್ದು, ಪ್ರಶಸ್ತಿ ಪುರಸ್ಕೃತರ ಸಾಧನೆಯನ್ನು ಕೊಂಡಾಡಿದರು.

ನಾಲ್ಕು ದಶಕಗಳ ಕೃಷಿ ತಪಸ್ಸು "ಕೃಷಿ ಕೇವಲ ಕಾಯಕವಲ್ಲ, ಅದೊಂದು ನಿರಂತರ ನಾವೀನ್ಯತೆ" ಎಂಬುದನ್ನು ಸಾಬೀತುಪಡಿಸಿದವರು ರಾಜೇಂದ್ರ ಭೋಸಲೆ. ಕಳೆದ 40 ವರ್ಷಗಳಿಂದ (ನಾಲ್ಕು ದಶಕಗಳು) ಕೃಷಿ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಪ್ರಯೋಗ ಹಾಗೂ ಸಾಧನೆಗಳ ಮೂಲಕ ಗುರುತಿಸಿಕೊಂಡಿರುವ ಇವರು, ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದ್ದಾರೆ.

ಅವರ ಈ ಅನನ್ಯ ಸಾಧನೆಯನ್ನು ಗುರುತಿಸಿ ಜೀ ಕನ್ನಡ ನ್ಯೂಸ್ ವಾಹಿನಿಯು ಈ ರಿಯಲ್ ಸ್ಟಾರ್ ಗೌರವವನ್ನು ನೀಡಿದ್ದು, ಮುದ್ದೇಬಿಹಾಳ ತಾಲ್ಲೂಕಿನಾದ್ಯಂತ ಹಾಗೂ ಕೃಷಿ ವಲಯದಲ್ಲಿ ವ್ಯಾಪಕ ಹರ್ಷ ವ್ಯಕ್ತವಾಗಿದೆ.

## ಪರವಾನಿಗೆ ಭದ್ರತೆ ಇಲ್ಲದೇ ಬೋಟ್ ಚಲನೆ ತಡೆಯಲು ಉಡುಚಪ್ಪ ಶ್ರೀರಾಮನಗರ ಆಗ್ರಹ



ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತುಂಗಭದ್ರಾ ನದಿ ಮತ್ತು ಹಂಪಿ–ಆನೆಗೊಂದಿ ಸುತ್ತಮುತ್ತಲಿನ ನದಿಪಾತ್ರದಲ್ಲಿ ಹಾಗೂ ಸಣಾಪುರ ಗ್ರಾ.ಪಂ ವ್ಯಾಪ್ತಿಯ ಋಷ್ಯಮುಖ ಪರ್ವತ, ಸಾಣಾಪುರ ಕೆರೆಗಳಲ್ಲಿ ಹಾಗೂ ಸಣಾಪುರ ಪ್ರವಾಸಿ ಮಂದಿರ ಹತ್ತಿರದ ವಾಟರ್ ಫಾಲ್ಸ್ ನಲ್ಲಿ ಯಾವುದೇ ಪರವಾನಿಗೆ ಇಲ್ಲದೇ, ಪ್ರವಾಸಿಗರಿಗೆ ಭದ್ರತೆ ಇಲ್ಲದೇ ಕಾನೂನುಬಾಹಿರವಾಗಿ ಬೋಟ್ (ಹರಿಗೋಲು) ಹಾಕುವ ಮೂಲಕ ಪ್ರವಾಸಿಗರಿಂದ ಲಕ್ಷಾಂತರ ರೂಪಾಯಿ ಪಡೆಯುತ್ತಿದ್ದಾರೆ.**

ಎಂದು ಕರ್ನಾಟಕ ದಲಿತ ಸೇನೆಯ ಕೊಪ್ಪಳ ಜಿಲ್ಲಾಧ್ಯಕ್ಷರಾದ ಉಡಚಪ್ಪ ಶ್ರೀರಾಮನಗರ ಅವರು ಖಂಡಿಸಿದರು. ಈ ರೀತಿಯಲ್ಲಿ ಹರಿಗೋಲು ಹಾಕಲು ಟೆಂಡರ್ ನಲ್ಲಿ ಭಾಗವಹಿಸಿ ಹಾಕಬಹುದಾಗಿದ್ದು, ಆದರೆ ಇಲ್ಲಿ ಯಾವುದೇ ಟೆಂಡರ್ ನಲ್ಲಿ ಭಾಗವಹಿಸದೇ, ಪ್ರವಾಸಿಗರಿಗೆ ಯಾವುದೇ ಲೈಫ್ ಜಾಕೇಟ್ ನಂತಹ ಭದ್ರತೆಗಳನ್ನು ನೀಡದೇ, ಸಂಬಂಧಪಟ್ಟ ಇಲಾಖೆ ಅಥವಾ ಸಕ್ಷಮ ಪ್ರಾಧಿಕಾರದ ಪರವಾನಿಗೆ ಇಲ್ಲದೇ ಕಾನೂನುಬಾಹಿರವಾಗಿ ಇಲ್ಲಿಯ ವಾಟರ್ ಫಾಲ್ಸ್, ಕೆರೆ ಹಾಗೂ ನದಿ ಪ್ರದೇಶಗಳಲ್ಲಿ ಹರಿಗೋಲು ಹಾಕಲಾಗುತ್ತಿದೆ.

ಅಲ್ಲದೇ ಈ ಕೆರೆ ಹಾಗೂ ನದಿ ಪ್ರದೇಶಗಳಲ್ಲಿ ನೀರುನಾಯಿ ಇರುವುದರಿಂದ ಪ್ರವಾಸಿಗರ ಜೀವಕ್ಕೆ ಹಾನಿಯುಂಟಾಗುವ ಸಂಭವವಿದ್ದು, ಅದಕ್ಕೆ ಅನಧಿಕೃತವಾಗಿ ಬೋಟ್ ಅಥವಾ ಹರಿಗೋಲು ಹಾಕಿದವರೇ ನೇರ ಹೊಣೆಗಾರರು ಎಂದು ಹೇಳಿದ್ದಾರೆ. ಈ ಬಗ್ಗೆ ಸ್ಥಳೀಯ ಗ್ರಾ.ಪಂ ಅಧಿಕಾರಿಗಳಿಗೆ, ತಾ.ಪಂ ಅಧಿಕಾರಿಗಳಿಗೆ, ತಹಶೀಲ್ದಾರರಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಇಷ್ಟರಲ್ಲೇ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಿ ಪ್ರತಿಭಟನೆ

# ಅಧಿಕಮಾಸದಲ್ಲಿ ಗೋವರ್ಧನ ಪೂಜೆ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರದ ಹಿರೇಜಂತಕಲ್ ವಿರೂಪಾಪುರದ ಆರ್ಯವೈಶ್ಯ ಸಮಾಜದ ವಾಸವಿ ಮಹಿಳಾ ಮಂಡಳಿಯ ನೇತೃತ್ವದಲ್ಲಿ ಅಧಿಕಮಾಸದ ಅಂಗವಾಗಿ ಶುಕ್ರವಾರ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಶ್ರೀ ಗೋವರ್ಧನ ಪೂಜೆಯನ್ನು ಭಕ್ತಿಭಾವದಿಂದ ನೆರವೇರಿಸಲಾಯಿತು.**

ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗೆ ಉಡಿ ತುಂಬುವಿಕೆ, ಧೂಪ?ದೀಪ ಆರಾಧನೆ, 33 ವಿವಿಧ ಬಗೆಯ ತಿಂಡಿ?ತಿನಿಸುಗಳ ನೈವೇದ್ಯ ಸಮರ್ಪಣೆ ಹಾಗೂ 33 ಭಕ್ತಿಗೀತೆಗಳ ಗಾಯನದ ಮೂಲಕ ಭಕ್ತರು ತಮ್ಮ ಭಕ್ತಿಪರಾಕಾಷ್ಠೆಯನ್ನು ಮೆರೆದರು. ಈ ಸಂದರ್ಭದಲ್ಲಿ ಮಾತನಾಡಿದ ವಾಸವಿ ಮಹಿಳಾ ಮಂಡಳಿಯ ಅಧ್ಯಕ್ಷೆ ರುಕ್ಮಿಣಿ



ದಮ್ಮೂರು, ಅಧಿಕಮಾಸದ ಆರಂಭದಿಂದಲೇ ಪ್ರತಿದಿನ ವಿಶೇಷ ಧಾರ್ಮಿಕ ಪೂಜಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಅಮಾವಾಸ್ಯೆಯಂದು ಅಧಿಕಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು ಸಮಾರೋಪಗೊಳ್ಳಲಿವೆ ಎಂದು ತಿಳಿಸಿದರು.

ಆರ್ಯವೈಶ್ಯ ಸಮಾಜದ ಅಧ್ಯಕ್ಷ ನಾಗರಾಜ ದರೋಜಿ ಮಾತನಾಡಿ, ಧಾರ್ಮಿಕ ಆಚರಣೆಗಳ ಮೂಲಕ ಸಮಾಜದ ಸಂಘಟನೆಗೆ ಉತ್ತೇಜನ ನೀಡಲಾಗುತ್ತಿದೆ. ದೇವಸ್ಥಾನದ ವಿವಿಧ ಧಾರ್ಮಿಕ ಕಾರ್ಯಕ್ರಮಗಳ ಯಶಸ್ಸಿಗೆ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಪ್ರಮುಖ ಕಾರಣವಾಗಿದೆ ಎಂದು ಹೇಳಿದರು. ದೇವಸ್ಥಾನದ ಉತ್ತರ ಭಾಗದಲ್ಲಿ ರಾಜಗೋಪುರ ನಿರ್ಮಾಣ ಕಾಮಗಾರಿ ಭರದಿಂದ ಸಾಗುತ್ತಿದ್ದು, ದೇವಸ್ಥಾನದ ಪಕ್ಕದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡುವ ಸಂಕಲ್ಪ ಹೊಂದಲಾಗಿದೆ ಎಂದು ತಿಳಿಸಿದರು.

ಅಲ್ಲದೆ, ಶನಿವಾರ ವೆಂಕಟಗಿರಿಯ ಶ್ರೀ ವೆಂಕಟೇಶ್ವರ ದೇವಸ್ಥಾನಕ್ಕೆ ಐದನೇ ವರ್ಷದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮಹಿಳಾ ಮಂಡಳಿಯ ಕಾರ್ಯದರ್ಶಿ ರಾಧಿಕಾ, ಉಪಾಧ್ಯಕ್ಷೆ ರೇಖಾ, ಪದ್ಮಾವತಿ, ನಾಗರಾಜ, ಮಂಜುಳಾ ದಮ್ಮೂರು, ಉಷಾ ಸೇರಿದಂತೆ ಅಪಾರ ಸಂಖ್ಯೆಯ ಭಕ್ತಾದಿಗಳು ಪಾಲ್ಗೊಂಡಿದ್ದರು.

## ಸರ್ಕಾರಿ ಶಾಲಾ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಹೆಗಲಾದ ಕರವೇ ಸ್ವಾಭಿಮಾನಿ ಬಣ ಉಚಿತ ಪುಸ್ತಕ ವಿತರಿಸಿ ದಾನಿಗಳಿಗೆ ಸನ್ಮಾನ

**ಸರ್ಕಾರಿ ಶಾಲೆಗಳನ್ನು ಉಳಿಸಿ, ಬೆಳೆಸುವ ಹಾಗೂ ಅಲ್ಲಿನ ಮೂಲಸೌಕರ್ಯಗಳನ್ನು ಉತ್ತಮಪಡಿಸುವ ಪವಿತ್ರ ಕರ್ತವ್ಯ ಪ್ರತಿಯೊಬ್ಬ ನಾಗರಿಕನ ಮೇಲಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಕೊಡಗು ಜಿಲ್ಲಾ ಉಪಾಧ್ಯಕ್ಷರಾದ ರಾಜಶೇಖರ್ ಗೌಡ ಪ್ರತಿಪಾದಿಸಿದರು.**

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ಹೋಬಳಿಯ ನಂದಿಗುಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ಹಾಗೂ ಲೇಖನ ಸಾಮಗ್ರಿ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ಶಾಲಾ ಮಕ್ಕಳ ಸುಮಧುರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮಾತನಾಡಿದ ರಾಜಶೇಖರ್ ಗೌಡ, ನಮ್ಮ ಸಂಘಟನೆಯ ವತಿಯಿಂದ ಗ್ರಾಮೀಣ ಭಾಗದ ಸರ್ಕಾರಿ ಶಾಲಾ ಮಕ್ಕಳಿಗೆ ಅಗತ್ಯವಿರುವ ಶೈಕ್ಷಣಿಕ ಸಾಮಗ್ರಿಗಳನ್ನು ತಲುಪಿಸುತ್ತಿರುವುದು ಹೆಮ್ಮೆಯ ವಿಚಾರ. ಶಾಲಾ ಆವರಣವನ್ನು ಅತ್ಯಂತ ಸ್ವಚ್ಛವಾಗಿ, ಶಿಸ್ತುಬದ್ಧವಾಗಿ ಮತ್ತು ಆಕರ್ಷಕವಾಗಿ ಇಟ್ಟುಕೊಂಡಿರುವ ಇಲ್ಲಿನ ಶಿಕ್ಷಕರ ಸೇವೆ ಅನನ್ಯವಾದುದು," ಎಂದು ಶಿಕ್ಷಕ ವೃಂದಕ್ಕೆ ಮುಕ್ತ ಕಂಠದಿಂದ ಕೃತಜ್ಞತೆ ಸಲ್ಲಿಸಿದರು. ಲೇಖನ ಸಾಮಗ್ರಿಗಳನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಂಡು ಉನ್ನತ



ಮಟ್ಟಕ್ಕೆ ಬೆಳೆಯಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಕರವೇ ಕುಶಾಲನಗರ ತಾಲೂಕು ಅಧ್ಯಕ್ಷ ಶಿವಣ್ಣ, "ಇಂದಿನ ದಿನಗಳಲ್ಲಿ ಸರ್ಕಾರಿ ಶಾಲೆಗಳೂ ಸಹ ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ವಿದ್ಯಾರ್ಥಿಗಳು ಯಾವುದೇ ಖಾಸಗಿ ಶಾಲೆಗೆ ಕಮ್ಮಿಯಿಲ್ಲದಂತೆ ಶ್ರದ್ಧೆಯಿಂದ ಓದಿ, ಹೆತ್ತವರಿಗೆ ಹಾಗೂ ಶಾಲೆಗೆ ಕೀರ್ತಿ ತರಬೇಕು," ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು. ಇದೇ ಸಂದರ್ಭದಲ್ಲಿ ನಂದಿಗುಂದ ಶಾಲಾ ವಿದ್ಯಾರ್ಥಿಗಳಿಗೆ ಸ್ವಂತ ಖರ್ಚಿನಲ್ಲಿ ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ ಉದಾರಿ ದಾನಿಗಳಾದ ನಳಿನಿ ರಾಜಶೇಖರ್ ಅವರನ್ನು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ವತಿಯಿಂದ ಶಾಲು ಹೊದಿಸಿ ಮತ್ತು ನೆನಪಿನ ಕಾಣಿಕೆ ನೀಡಿ ಅತ್ಯಂತ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು ಮತ್ತು ಮಕ್ಕಳಿಗೆ ಸಿಹಂಚಲಾಯಿತು.

ಈ ಪುಸ್ತಕ ವಿತರಣೆ ಕಾರ್ಯಕ್ರಮದಲ್ಲಿ ಕರವೇ ಸ್ವಾಭಿಮಾನಿ ಬಣದ ಕೊಡಗು ಜಿಲ್ಲಾಧ್ಯಕ್ಷರಾದ ಫ್ರಾನ್ಸಿಸ್ ಡಿಸೋಜ, ಜಿಲ್ಲಾ ಗೌರವಾಧ್ಯಕ್ಷ ಚಂದ್ರು, ಮಹಿಳಾ ಜಿಲ್ಲಾ ಅಧ್ಯಕ್ಷೆ ಜಯಶ್ರೀ ಮುರುಗೇಶ್ ಹಾಗೂ ಜಿಲ್ಲಾ ಸಲಹೆಗಾರ ಸಜಿಲ್ ಕುಮಾರ್ ಮತ್ತು ಕರವೇ ಕಾರ್ಮಿಕ ಘಟಕದ ಉಪಾಧ್ಯಕ್ಷ ಮಣಿಕಂಠ, ಮತ್ತು ನೆಲ್ಲಿಹುದಿಕೇರಿ ಘಟಕದ ಮತ್ತು ಅಧ್ಯಕ್ಷ ಹರೀಶ್,ಮತ್ತು ಕಾರ್ಯದರ್ಶಿ ನಂದ, ಮತ್ತು ಸಂಘಟನೆಯ ಪ್ರಮುಖ ಕಾರ್ಯಕರ್ತರಾದ ಬಾಲಕೃಷ್ಣ, ನಂಜಪ್ಪ, ರಮೇಶ್ ಹಾಗೂ ಕಾರ್ತಿಕ್ ಸೇರಿದಂತೆ ಶಾಲೆಯ ಮುಖ್ಯ ಶಿಕ್ಷಕರಾದ ವಸಂತಿ ಮತ್ತು ಸಹ ಶಿಕ್ಷಕರಾದ ಸಂಧ್ಯಾ ಭಾಗವಹಿಸಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka